ಅಧ್ಯಕ್ಷರು: ಮಾಡುತ್ತೀರೋ ಅಥವಾ ಇಲ್ಲವೋ ಅದನ್ನು ಹೇಳಿ.

ಆರ್.ವಿ.ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂತೆ ಕೋಲಾರದಲ್ಲಿ PG Center ಇದೆ, land ಇದೆ. ಹಾಗಾಗಿ ಈಗ ಏನು recommendations ಬಂದಿದೆ, ಅದರಲ್ಲಿ ಕೋಲಾರದಲ್ಲಿ head quarters ಮಾಡಿ ಒಂದು ವಿಶ್ವವಿದ್ಯಾನಿಲಯ ಮಾಡಬೇಕೆಂದು ಒಂದು recommendation ಇದೆ. ಈಗಾಗಲೇ ನಾವು ಕಾನೂನು ಇಲಾಖೆಗೆ, Parliamentary Department ಗೆ scrutiny ಮಾಡಲು ಕಳುಹಿಸಿದ್ದೇವೆ. ಅದು ಕ್ಯಾಬಿನೆಟ್‌ಗೆ ಹೋಗುತ್ತದೆ. ಅವರು ಏನು ಹೇಳಿದ್ದಾರೆ ಅದನ್ನು ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆಂಬ ಭರವಸೆಯನ್ನು ಈ ಸಂದರ್ಭದಲ್ಲಿ ಕೊಡುತ್ತೇನೆ.

ಹೆಣ್ಣು ಮಕ್ಕಳ ಸುರಕ್ಷತೆ

25(328), ಶ್ರೀ ರವಿ ಸುಬ್ರಹ್ಮಣ್ಯಂ (ಬಸವನಗುಡಿ)

ಅ) ರಾಜ್ಯದಲ್ಲಿರುವ ಸರ್ಕಾರಿ ಶಾಲೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು, ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲಾ ವಲಯ ವಿವರ ನೀಡುವುದು)

ಆ) ಈ ಶಾಲೆಗಳಲ್ಲಿನ ಹೆಣ್ಣುಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ;

ಇ) ಹೆಣ್ಣು ಮಕ್ಕಳ ಸುರಕ್ಷತೆಗಾಗಿ ಸರ್ಕಾರಿ ಶಾಲೆಗಳಿಗೆ ಹಾಗೂ ಖಾಸಗಿ ಶಾಲೆಗಳಲ್ಲಿರುವ ಮಾನದಂಡಗಳೇನು;

ಈ) ಹೆಣ್ಣು ಮಕ್ಕಳ ಸುರಕ್ಷತೆ ಕಾಪಾಡಲು, ಖಾಸಗಿ ಶಾಲೆಗಳಿಗೆ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಗಳು ಸರ್ಕಾರಿ ಶಾಲೆಗಳಿಗೂ ಅನ್ವಯವಾಗುತ್ತದೆಯೇ;

ಉ) ಹಾಗಿದ್ದಲ್ಲಿ, ಎಷ್ಟು ಸರ್ಕಾರಿ ಶಾಲೆಗಳಲ್ಲಿ ಸಿ.ಸಿ. ಟಿವಿಗಳನ್ನು ಅಳವಡಿಸಲಾಗಿದೆ (ಶಾಲೆಯ ವಿಳಾಸದೊಂದಿಗೆ ಜಿಲ್ಲಾವಾರು ಮಾಹಿತಿ ನೀಡುವುದು)

ಶ್ರೀ ಕಿಮ್ಮನೆ ರತ್ನಾಕರ್ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಕಿರಿಯ ಪ್ರಾಥಮಿಕ ಶಾಲೆ – 21996
ಹಿರಿಯ ಪ್ರಾಥಮಿಕ ಶಾಲೆ – 22517
ಪ್ರೌಢಶಾಲೆಗಳು – 4542
(ಅನುಬಂಧ–1)

ಆ) ಹೆಣ್ಣು ಮಕ್ಕಳ ಸುರಕ್ಷತೆಗಾಗಿ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿಯನ್ನೊಳಗೊಂಡ ಸುತ್ತೋಲೆ ಲಗತ್ತಿಸಿದೆ. (ಅನುಬಂಧ–2)

ಇ) ಶಾಲೆಗಳು ಸರ್ಕಾರಿಯಾಗಲೀ/ಖಾಸಗಿಯಾಗಿರಲಿ ಹೆಣ್ಣು ಮಕ್ಕಳ ಸುರಕ್ಷತೆಗೆ ಮೇಲಿನ ಸುತ್ತೋಲೆಯಂತೆ ಮಾನದಂಡಗಳನ್ನು ಅಳವಡಿಸಿಕೊಂಡಿದೆ.

ಈ) ಹೌದು, ಖಾಸಗಿ ಶಾಲೆಗಳಿಗೆ ಹೊರಡಿಸಿರುವ ಮಾನದಂಡಗಳು ಸರ್ಕಾರಿ ಶಾಲೆಗಳಿಗೂ ಅನ್ವಯವಾಗುತ್ತವೆ.

ಉ) ಸರ್ಕಾರಿ ಶಾಲೆಗಳಲ್ಲಿ ಸಿ.ಸಿ. ಟಿವಿಗಳನ್ನು ಅಳವಡಿಸುವ ಪ್ರಕ್ರಿಯೆಯನ್ನು ಬೆಂಗಳೂರು ನಗರಕ್ಕೆ ಸೀಮಿತಗೊಳಿಸಿ 200ಕ್ಕಿಂತ ಹೆಚ್ಚು ಹೆಣ್ಣು ಮಕ್ಕಳು ವ್ಯಾಸಂಗ ಮಾಡುತ್ತಿರುವ ಪ್ರಾಥಮಿಕ ಶಾಲೆಗಳಿಗೆ ಮಾತ್ರ ಮೊದಲ ಹಂತದಲ್ಲಿ ಸಿ.ಸಿ. ಟಿವಿಗಳನ್ನು (ಪ್ರತಿ ಶಾಲೆಗೆ 4 ರಂತೆ) ಹಾಗೂ ಅವುಗಳಿಗೆ ಸಂಬಂಧಿಸಿದ ಪರಿಕರಗಳನ್ನು ಅಳವಡಿಸಲು ಸರ್ಕಾರವು ದಿ:02.12.2014ರಲ್ಲಿ ಆದೇಶವನ್ನು ಹೊರಡಿಸಿದೆ. (ಅನುಬಂಧ–3)

"ಅನುಬಂಧ-1"

Annexure - I

SARVASHIKSHANA ABHIYAN, KARNATAKA

District Wise Schools as on 30th September 2013

Sl. No.	District Name	Department of Education			Social Welfare			Local Body			Aided			Un Aided			Central Schools			Others			Total Schools		
		LPS	HPS	HS	LPS	HPS	HS	LPS	HPS	HS	LPS	HPS	HS	LPS	HPS	HS	LPS	HPS	HS	LPS	HPS	HS	LPS	HPS	HS
	BANGALORE Division																								
1	BANGALORE RURAL	674	442	63	0	4	4	0	0	0	0	12	41	36	164	104	0	1	1	0	0	0	710	623	213
2	BANGALORE U NORTH	246	260	54	1	2	2	0	6	18	15	176	131	145	952	707	0	6	9	0	1	0	403	1 403	921
3	BANGALORE U SOUTH	432	448	182	2	3	3	1	7	17	24	190	157	240	1,393	975	0	5	4	1	7	2	700	2 059	1 240
4	CHIKKABALLAPURA	965	535	111	4	13	13	0	0	0	2	41	37	31	204	119	0	1	1	0	0	0	1 002	794	281
5	CHITRADURGA	331	347	112	3	20	19	0	0	0	3	78	191	57	150	95	0	1	1	0	0	0	894	1,106	418
6	DAVANAGERE	552	706	153	3	16	19	0	0	0	12	143	183	139	240	139	0	2	1	0	0	0	806	1,109	503
7	KOLAR	1,228	632	124	1	16	15	0	0	0	2	40	57	27	248	130	0	2	2	0	1	0	1,258	939	329
8	RAMANAGARA	865	452	107	5	20	13	0	0	0	1	24	72	26	142	93	0	0	0	0	0	0	897	638	290
9	SHIMOGA	937	942	163	5	17	16	0	0	0	3	93	140	85	236	133	0	2	1	0	0	0	1,030	1 290	453
10	TUMKUR	1,325	775	133	3	14	14	0	0	0	3	58	206	52	204	127	0	2	2	0	0	0	1,383	1,053	432
11	TUMKUR MADHUGIRI	732	533	95	2	14	14	0	0	0	0	7	103	33	77	54	0	0	0	0	0	0	767	631	255
	Total	8 387	6,572	1,202	29	141	138	1	13	35	65	852	1,318	871	4,026	2,676	0	22	22	1	9	2	9,855	11,645	5,333
	Belgaum Division																								
1	BAGALKOT	487	923	157	3	17	17	0	0	0	10	94	121	133	185	107	0	2	2	0	0	1	633	1,121	415
2	BELGAUM	599	817	128	5	12	11	0	1	2	2	63	194	124	185	118	0	6	5	0	0	0	730	1 085	458
3	BELGAUM CHIKKODI	774	1052	163	2	24	24	0	1	1	14	142	146	161	311	188	0	1	1	0	0	0	951	1,531	523
4	BIJAPUR	331	1050	142	2	17	17	0	0	0	30	90	197	398	260	144	0	3	3	0	0	0	1,261	1,420	503
5	DHARWAD	222	544	105	1	10	11	1	2	4	6	79	131	109	205	143	0	4	4	0	0	0	338	845	398
6	GADAG	184	432	111	3	11	10	0	2	2	6	42	96	66	93	69	0	2	1	0	1	1	259	582	290
7	HAVERI	457	705	136	9	18	18	0	1	1	4	54	150	99	125	74	0	1	1	0	0	0	559	908	381
8	UTTARA KANNADA	499	485	[illegible]	0	4	4	0	0	0	5	23	92	20	59	41	0	2	2	0	0	0	514	573	193
9	UTTARA KANNADA SIRSI	532	509	73	3	8	8	0	0	0	1	14	59	4	41	30	0	2	2	0	0	0	640	574	172
	Total	4,575	6,417	1,074	28	121	120	1	7	11	73	601	1,196	1,113	1,470	914	0	23	21	0	1	2	5 695	8 640	3 329

	Gulbarga Division																								
1	BELLARY	529	629	173	2	26	23	0	0	0	3	69	67	218	291	191	0	4	4	0	0	0	752	1,221	434
2	BIDAR	538	731	160	1	16	16	0	1	0	9	184	126	282	305	193	0	2	2	0	0	0	830	1,239	497
3	GULBARGA	795	1003	274	4	30	31	0	0	0	14	178	105	362	401	318	2	2	2	0	0	0	1,177	1614	730
4	KOPPAL	392	571	146	3	17	16	0	0	0	2	14	26	138	176	81	0	1	1	0	0	0	535	779	270
5	RAICHUR	699	760	188	10	25	23	0	0	0	4	41	33	177	258	152	0	2	2	0	0	0	890	1,106	396
6	YADAGIRI	463	470	122	1	15	15	0	0	0	3	26	16	141	53	60	0	0	0	0	0	0	608	604	213
	Total	3,416	4,384	1,063	21	131	130	0	1	0	35	512	393	1,318	1,524	995	2	11	11	0	0	0	4,792	6,563	2,592
	Mysore Division																								
1	CHAMARAJANAGARA	349	413	86	19	13	12	0	0	0	7	33	51	39	90	54	0	2	2	0	0	0	414	551	205
2	CHIKKAMANGALORE	741	680	116	14	21	20	0	0	0	1	25	117	45	142	66	0	2	2	0	0	0	801	870	321
3	DAKSHINA KANNADA	275	653	163	9	14	11	0	0	0	11	211	120	44	249	221	0	3	3	0	0	0	339	1 130	516
4	HASSAN	1391	994	241	4	28	26	0	0	0	1	521	136	68	231	125	0	2	2	0	0	0	1 464	1,307	532
5	KODAGU	139	263	47	2	17	6	0	3	0	1	10	45	15	84	69	0	3	3	0	0	1	161	380	173
6	MANDYA	911	624	215	2	24	24	0	0	0	2	49	89	65	227	124	0	1	1	0	0	0	980	1,125	453
7	MYSORE	965	955	229	3	44	25	0	0	0	7	127	126	109	397	280	0	6	6	0	0	0	1,084	1,529	666
8	UDUPI	247	362	106	1	5	5	0	0	0	14	202	74	11	117	102	0	1	1	0	0	0	273	687	288
	Total	5,018	5,144	1,203	54	166	129	0	3	0	44	709	763	400	1,537	1,040	0	20	20	0	0	1	5,516	7,579	3,156
	Grand Total	21,895	22,517	4,542	132	559	517	2	24	45	223	2,684	3,650	3,702	6,557	5,625	2	76	74	1	10	5	26,058	34,427	14,469

Source: U-DISE 2012-13

E Govenace Unit, SSA Bangalore

ಅನುಬಂಧ–2

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು–560001

ಸಂಖ್ಯೆ:ಸಿ7(2)ಪ್ರಾ.ಶಿ.ಅ./ಶಾ.ಮ.ಲೈ.ಕಿ.40/2014–15 ದಿನಾಂಕ:23.07.2014

ವಿಷಯ : ರಾಜ್ಯದ ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಮೇಲೆ ಲೈಂಗಿಕ ಕಿರುಕುಳ/ಅತ್ಯಾಚಾರ ಹಾಗೂ ದೈಹಿಕ ಹಿಂಸೆ ನಡೆಯುತ್ತಿರುವುದನ್ನು ತಡೆಗಟ್ಟುವ ಬಗ್ಗೆ.

* * * * *

ರಾಜ್ಯದ ಸರ್ಕಾರಿ ಮತ್ತು ಖಾಸಗಿ ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಮೇಲೆ ಹಾಗೂ ಮಹಿಳಾ ಸಿಬ್ಬಂದಿಗಳ ಮೇಲೆ ಲೈಂಗಿಕ ಕಿರುಕುಳ/ಅತ್ಯಾಚಾರ ಹಾಗೂ ದೈಹಿಕ ಹಿಂಸೆ ಸೇರಿದಂತೆ ಹಲವಾರು ಪ್ರಕರಣಗಳು ಗಣನೀಯವಾಗಿ ನಡೆಯುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಈ ವಿಷಯವು ಅತ್ಯಂತ ಗಂಭೀರವಾಗಿದ್ದು, ಸರ್ಕಾರ ಮತ್ತು ಸಮಾಜಕ್ಕೆ ತಲೆತಗ್ಗಿಸುವ ಸ್ಥಿತಿಯಾಗಿರುತ್ತದೆ, ಇದನ್ನು ತಡೆಗಟ್ಟುವುದು ಸರ್ಕಾರದ/ಇಲಾಖೆಯ ಆದ್ಯ ಕರ್ತವ್ಯವಾಗಿರುತ್ತದೆ.

ಮಹಿಳೆಯರ, ಮಕ್ಕಳ ಹಾಗೂ ಶಾಲಾ ವಿದ್ಯಾರ್ಥಿನಿಯರ ಮೇಲೆ ಪದೇ ಪದೇ ಲೈಂಗಿಕ ದೌರ್ಜನ್ಯಗಳು, ಕಿರುಕುಳ ಅತ್ಯಾಚಾರಗಳು ರಾಜ್ಯದ ವಿವಿಧೆಡೆಗಳಲ್ಲಿ ನಡೆಯುತ್ತಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗುತ್ತಿದೆ. ಈ ನಿಟ್ಟಿನಲ್ಲಿ ಸಮಾಜವೇ ಬೆಚ್ಚಿಬೀಳುವಂತಾಗಿದೆ. ಈ ಹಿನ್ನಲೆಯಲ್ಲಿ ಈ ರೀತಿಯ ದುರ್ಘಟನೆಗಳನ್ನು ಸರ್ಕಾರ/ಇಲಾಖೆಯು ತುಂಬಾ ಗಂಭೀರವಾಗಿ ಪರಿಗಣಿಸಿದ್ದು, ಶಾಲಾ ಕಾಲೇಜುಗಳ ವಿದ್ಯಾರ್ಥಿನಿಯರ ಮೇಲೆ ಲೈಂಗಿಕ

ದೌರ್ಜನ್ಯ ತಡೆಗಟ್ಟಲು/ಹತ್ತಿಕ್ಕಲು ಕೆಳಗೆ ತಿಳಿಸಿರುವ ಕ್ರಮಗಳನ್ನು ಅನುಸರಿಸಿ, ಶಾಲೆಗಳಿಗೆ ಒಂದು ಸುತ್ತೋಲೆಯನ್ನು ಹೊರಡಿಸಿಸುವ ಮೂಲಕ ಎಲ್ಲಾ ಜಿಲ್ಲಾ ಸ್ಥಳೀಯ ಪ್ರಾಧಿಕಾರಿಗಳಿಗೆ ಈ ಮೂಲಕ ಆದೇಶಿಸಿದೆ ಹಾಗೂ ಈ ಬಗ್ಗೆ ಮೇಲುಸ್ತುವಾರಿಯನ್ನು ತಾಲ್ಲೂಕು ಮಟ್ಟದ ಎಲ್ಲಾ ಅಧಿಕಾರಿಗಳು ಸಮಯೋಚಿತವಾಗಿ ಪರಿಶೀಲಿಸಿ ಸೂಕ್ತಕ್ರಮ ಕೈಗೊಳ್ಳಲು ನಿರ್ದೇಶಿಸಿದೆ.

1. ಪ್ರತಿಯೊಂದು ಶಾಲೆಯು ಆಯಾ ಶಾಲಾ ವ್ಯಾಪ್ತಿಯ ಪೊಲೀಸ್ ಠಾಣೆಯಲ್ಲಿ ಶಾಲೆಯ ಹೆಸರು ಮತ್ತು ವಿಳಾಸದ ಮಾಹಿತಿ ನೀಡುವುದು.
2. ಶಾಲಾ ಆಡಳಿತ ಮಂಡಳಿಯ ಪದಾಧಿಕಾರಿಗಳ ಹೆಸರು ಮತ್ತು ಪೂರ್ಣ ವಿಳಾಸವನ್ನು ಪೊಲೀಸ್ ಠಾಣೆಯಲ್ಲಿ ಮಾಹಿತಿಯನ್ನು ನೀಡುವುದು.
3. ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರು/ಸಿಬ್ಬಂದಿಯ ವಿವರಗಳನ್ನು ಕಾಲಕಾಲಕ್ಕೆ ಸಂಬಂಧಪಟ್ಟ ಶಾಲಾ ವ್ಯಾಪ್ತಿಯ ಪೊಲೀಸ್ ಠಾಣೆಯಲ್ಲಿ ದಾಖಲಿಸುವುದು.

ಪ್ರತೀ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಮೇಲಿನ ಲೈಂಗಿಕ ಕಿರುಕುಳ ಇತರೆ ದೌರ್ಜನ್ಯಗಳ ಪ್ರಕರಣಗಳನ್ನು ತಡೆಗಟ್ಟುವ ಸಲುವಾಗಿ 'ಮಕ್ಕಳ ಸುರಕ್ಷ ಸಮಿತಿ' ಯನ್ನು ಶಾಲಾಮಟ್ಟದಲ್ಲಿ ರಚಿಸತಕ್ಕದ್ದು.

ಸಮಿತಿಯಲ್ಲಿ ನಾಲ್ಕರಿಂದ ಐದು ಸದಸ್ಯರಿರಬಹುದಾಗಿದ್ದು, ಅಧ್ಯಕ್ಷರು ಆಯಾ ಶಾಲೆಯ ಮುಖ್ಯಸ್ಥರಾಗಿದ್ದು, ಶಿಕ್ಷಕರು, ವಿದ್ಯಾರ್ಥಿಯ ಪೋಷಕರು, ಮಕ್ಕಳು, ಭದ್ರತೆ ಒದಗಿಸುವ ಸಿಬ್ಬಂದಿ, ಮಕ್ಕಳ ಅಭಿವೃದ್ಧಿಯಲ್ಲಿ ಆಸಕ್ತಿ ಇರುವ ಒಬ್ಬ ಶಾಲೆಗೆ ಸಂಬಂಧಪಡದ ವ್ಯಕ್ತಿಯನ್ನು ಒಳಗೊಂಡಿರತಕ್ಕದ್ದು.

ಪೋಷಕರ ಜವಾಬ್ದಾರಿಗಳು:

- ಅಪ್ರಾಪ್ತ ವಯಸ್ಸಿನ ಮಕ್ಕಳನ್ನು ಪೋಷಕರು ಶಾಲೆಗೆ ಕಳುಹಿಸುವಾಗ ಯಾವುದೇ ವ್ಯಕ್ತಿಯ ಜೊತೆಗೆ ಸಂಭಾಷಣೆ ಮತ್ತು ಸ್ನೇಹ ಮಾಡದಂತೆ ಮಕ್ಕಳಿಗೆ ಮನವರಿಕೆ ಮಾಡುವುದು ಹಾಗೂ ಮಗುವಿಗೆ ಮತ್ತು

ಪೋಷಕರಿಗೆ ಪರಿಚಯವಿರುವ ವ್ಯಕ್ತಿಯಾಗಿದ್ದರೂ ಕೂಡ ಪೋಷಕರರ ಗಮನಕ್ಕೆ ಬಾರದೆ ಯಾವುದೇ ವಿಚಾರವನ್ನು ಪ್ರಸ್ತಾಪಿಸದಂತೆ/ ಸಲುಗೆಯಿಂದ ಇರದಂತೆ ಮಕ್ಕಳಿಗೆ ಮನವರಿಕೆ ಮಾಡುವುದು.

- ಬಾಲಕಿಯರ/ಮಹಿಳೆಯರ ಮೊಬೈಲ್‌ಗೆ ಲೈಂಗಿಕ ಪ್ರಚೋದನೆಯ ಬಗ್ಗೆ ಎಸ್.ಎಂ.ಎಸ್. ಸಂದೇಶ ಅಥವಾ ಇನ್ನಿತರ ಅನುಚಿತ ಮಾರ್ಗದಲ್ಲಿ ರವಾನೆಯಾಗಬಹುದಾದ/ತಿಳಿಸಬಹುದಾದ ಅಸಹ್ಯಕರ ದೃಶ್ಯಗಳು/ ಚಿತ್ರಗಳನ್ನು ಕಳುಹಿಸುವುದು ಕಂಡು ಬಂದಲ್ಲಿ ಕೂಡಲೇ ತಾನಿರುವ ಸಮೀಪದ ಪೊಲೀಸ್ ಠಾಣೆಗೆ ದೂರು ನೀಡುವುದು.
- ಪೋಷಕರು ತಮ್ಮ ಮಕ್ಕಳನ್ನು ಆದಷ್ಟು ಮನೆಯ ಸಮೀಪದ ಶಾಲೆಗಳಲ್ಲಿಯೇ ದಾಖಲು ಮಾಡುವುದು.

ಶಾಲಾ ಮುಖ್ಯಸ್ಥರ ಮತ್ತು ಖಾಸಗಿ ಶಾಲಾ ಆಡಳಿತ ಮಂಡಳಿಯ ಜವಾಬ್ದಾರಿ:

- ಶಾಲಾ ಆಡಳಿತ ಮಂಡಳಿಯು ಮಕ್ಕಳನ್ನು ಸಂಬಂಧಪಟ್ಟ ಪೋಷಕರು/ಪೋಷಕರರ ಸಂಬಂಧಿಕರು (ಅಧಿಕೃತ ಗುರುತಿನ ಚೀಟಿ ಹೊಂದಿರುವ) ಬಂದಾಗ ಮಾತ್ರ ಮಕ್ಕಳನ್ನು ಶಾಲೆಯಿಂದ ಹೊರಗೆ ಕಳುಹಿಸುವುದು.
- ಅಪ್ರಾಪ್ತ ವಿದ್ಯಾರ್ಥಿನಿಯರನ್ನು ಒಂಟಿಯಾಗಿ ಪುರುಷ ಸಿಬ್ಬಂದಿವರ್ಗದೊಂದಿಗೆ ಇರದಂತೆ ನೋಡಿಕೊಳ್ಳುವುದು.
- ತುರ್ತು ಪರಿಸ್ಥಿತಿಗಳಲ್ಲಿ ಶಾಲೆಯ ಮಹಿಳಾ ಶಿಕ್ಷಕರನ್ನೇ ಅಧಿಕೃತ ಪ್ರತಿನಿಧಿಯಾಗಿ ಪ್ರಾಂಶುಪಾಲರು ನೇಮಿಸಿ ಸಂಬಂಧಿಸಿದ ಮಹಿಳಾ ವಿದ್ಯಾರ್ಥಿಯ ಪೋಷಕರು ಬರುವವರೆಗೂ ಪರಿಸ್ಥಿತಿಯ ಬಗ್ಗೆ ನಿಗಾವಹಹಿಸಲು ಸೂಚಿಸುವುದು.
- ಮಕ್ಕಳು ವಿದ್ಯಾಭ್ಯಾಸ ಮಾಡುವ ತರಗತಿಗಳಲ್ಲಿ ಹಿರಿಯ ಮತ್ತು ಕಿರಿಯ ವಿದ್ಯಾರ್ಥಿಗಳನ್ನು ಒಂದೇ ವಿಭಾಗದಲ್ಲಿ ಕೂರಿಸದೇ ಪ್ರತ್ಯೇಕವಾಗಿ ಕೂರುವಂತೆ ವ್ಯವಸ್ಥೆ ಮಾಡುವುದು.

- ಶಾಲಾ ಆಡಳಿತ ಮಂಡಳಿಯು ಪುರುಷ ಮತ್ತು ಮಹಿಳೆಯರಿಗೆ ಪ್ರತ್ಯೇಕವಾದ ಶೌಚಾಲಯ ವ್ಯವಸ್ಥೆಯನ್ನು ಕಲ್ಪಿಸಿ ಪರಸ್ಪರ ಶೌಚಾಯಗಳನ್ನು ಸಾಧ್ಯವಾದಷ್ಟು ದೂರವಿರುವಂತೆ ನಿರ್ಮಿಸುವುದು. ಮಹಿಳಾ ಶೌಚಾಲಯಗಳ ಬಳಿ ಸುರಕ್ಷತೆಯನ್ನು ಕಾಪಾಡುವ ನಿಟ್ಟಿನಲ್ಲಿ ಮಹಿಳಾ ಆಯಾಗಳನ್ನು ನೇಮಕ ಮಾಡಿಕೊಳ್ಳುವುದು.
- ಶಾಲಾ ಆಡಳಿತ ಮಂಡಳಿಯು ಶಾಲೆಯಲ್ಲಿನ ಸಾರಿಗೆ ಸುರಕ್ಷತೆ, ಹೌಸ್ ಕೀಪಿಂಗ್, ಮತ್ತು ಕ್ಯಾಂಟಿನ್‌ಗಳಲ್ಲಿ ಕರ್ತವ್ಯ ನಿರ್ವಹಿಸಲು ನೇಮಿಸಿಕೊಳ್ಳುವ ನೌಕರರುಗಳನ್ನು ಪ್ರತಿಷ್ಠಿತ ಹೊರಗುತ್ತಿಗೆಯ ಏಜನ್ಸಿಗಳಿಂದಲೇ ನೇಮಿಸಿಕೊಳ್ಳುವುದು.
- ಶಾಲಾ ಆಡಳಿತ ಮಂಡಳಿಯು ನೇಮಕ ಮಾಡಿಕೊಂಡಿರುವ ನೌಕರರುಗಳ ಬಗ್ಗೆ ಹೊರಗುತ್ತಿಗೆ ಏಜನ್ಸಿರವರು ಪೊಲೀಸ್ ಇಲಾಖೆಯಿಂದ ಪರಿಶೀಲಿಸಲು ಅಗತ್ಯ ಕ್ರಮ ಕೈಗೊಳ್ಳುವುದು.
- ಶಾಲಾ ಆಡಳಿತ ಮಂಡಳಿಯು ಮಹಿಳೆ ಮತ್ತು ಪುರುಷ ಭದ್ರತಾ ಸಿಬ್ಬಂದಿಗಳನ್ನು ನೇಮಕ ಮಾಡಿಕೊಂಡು ಶಾಲೆಯ ಆವರಣ/ಬಾಗಿಲುಗಳಲ್ಲಿ ಶಾಲಾ ಅವಧಿಯಲ್ಲಿ ಪರಿಶೀಲಿಸಲು ಕ್ರಮ ವಹಿಸುವುದು.
- ಮಕ್ಕಳ ಕಲ್ಯಾಣ ಸಮಿತಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ವಿಶೇಷ ಪೊಲೀಸ್ ಘಟಕಗಳ ಕಾರ್ಯವ್ಯಾಪ್ತಿಯ ದೂರವಾಣಿ ಸಂಖ್ಯೆಗಳನ್ನು ಸೂಚನಾ ಫಲಕದಲ್ಲಿ ಹಾಕುವುದು.
- ಶಾಲಾ ಆಡಳಿತ ಮಂಡಳಿಯು ಶಾಲೆ ಮುಗಿದ ನಂತರ ಯಾವುದೇ ವಿದ್ಯಾರ್ಥಿ/ನೌಕರರು ಶಾಲಾ ಆವರಣ ಮತ್ತು ಕೊಠಡಿಗಳಲ್ಲಿ ಇಲ್ಲದೇ ಇರುವ ಬಗ್ಗೆ ಪ್ರತಿದಿನವೂ ಭದ್ರತಾ ಸಿಬ್ಬಂದಿಯಿಂದ ವರದಿಯನ್ನು ಪ್ರಾಂಶುಪಾಲರು/ಹಿರಿಯ ಶಿಕ್ಷಕರಿಗೆ ಸಲ್ಲಿಸುವಂತೆ ಕ್ರಮ ವಹಿಸುವುದು.
- ಮಕ್ಕಳು ಪ್ರತಿದಿನವೂ ಬಳಸುವ ದ್ವಿಚಕ್ರ ವಾಹನ/ಆಟೋ/ಕ್ಯಾಬ್ ಅಥವಾ ಇತರೆ ಯಾವುದೇ ಸಾರಿಗೆ ವ್ಯವಸ್ಥೆಯಲ್ಲಿನ ಕರ್ತವ್ಯ ನಿರ್ವಹಿಸುವ ನೌಕರರ ನಡತೆಯು ತೃಪ್ತಿಕರವಾಗಿದೆ ಎನ್ನುವ ಬಗ್ಗೆ ವರದಿಯನ್ನು

ಶಾಲೆಗೆ ತಲುಪಿಸುವಂತೆ ಶಾಲಾ ಆಡಳಿತತ ಮಂಡಳಿಯು ಪೋಷಕರಿಗೆ ಸುತ್ತೋಲೆ ನೀಡುವುದು.

- ಶಾಲಾ ಆಡಳಿತ ಮಂಡಳಿಯು ಶಾಲೆಯಲ್ಲಿನ ಆಟದ ಮೈದಾನ, ಕೊಠಡಿ, ಕ್ಯಾಂಟೀನ್, ಶಾಲಾ ಆವರಣ, ಶೌಚಾಲಯ ಮತ್ತು ಇತರೆ ಶಾಲಾ ಪರಿಸರದಲ್ಲಿ ಅನಧಿಕೃತ ವ್ಯಕ್ತಿಗಳು ಅನುಮಾನಾಸ್ಪದವಾಗಿ ಕಂಡುಬಂದಲ್ಲಿ ಅಂತಹ ವ್ಯಕ್ತಿಗಳನ್ನು ತಪಾಸಣೆ ಮಾಡಲು ಸೂಕ್ತ ವ್ಯವಸ್ಥೆಯನ್ನು ಕಲ್ಪಿಸುವುದು.
- ಶಾಲಾ ಆಡಳಿತ ಮಂಡಳಿಯು ಶಾಲೆಯಲ್ಲಿನ ಮಕ್ಕಳ ಚಲನ-ವಲನ, ಮಕ್ಕಳು ಶಾಲೆಗೆ ಬರುವಾಗ ಮತ್ತು ತೆರಳುವಾಗ, ಆಟವಾಡುವ ಸಂದರ್ಭದಲ್ಲಿ, ಶೌಚಾಲಯಕ್ಕೆ ತೆರಳುವ ಸಂದರ್ಭಗಳಲ್ಲಿ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ರೊಟೇಶನ್ ಆಧಾರದ ಮೇಲೆ ಜಾಗ್ರತಾಧಿಕಾರಿಗಳನ್ನಾಗಿ ನೇಮಿಸಿ ಮಕ್ಕಳ ಚಲನ ವಲನಗಳ ಬಗ್ಗೆ ಸೂಕ್ಷ್ಮವಾಗಿ ಗಮನಿಸಲು ಕ್ರಮ ವಹಿಸುವುದು.
- ಶಾಲಾ ಆಡಳಿತ ಮಂಡಳಿಯು ಶಾಲೆಯಲ್ಲಿನ ಮಕ್ಕಳನ್ನು ಕತ್ತಲೆ ಕೋಣೆ/ಇತರೆ ಶಿಕ್ಷೆಯನ್ನು ನೀಡದಂತೆ ಕ್ರಮ ವಹಿಸುವುದು.
- ಶಾಲಾ ಆಡಳಿತ ಮಂಡಳಿಯು ಶಾಲೆಯಲ್ಲಿನ ಭದ್ರತೆ ಮತ್ತು ಇತರೆ ವಿಷಯಗಳಿಗೆ ಸಂಬಂಧಪಟ್ಟಂತೆ ಆಂತರಿಕವಾಗಿ ಶಾಲೆಯ ಸಿಬ್ಬಂದಿ, ಪೋಷಕರು, ಮತ್ತು ಶಿಕ್ಷಣ ಇಲಾಖೆಯ ಅಧಿಕಾರಿಗಳನ್ನೊಳಗೊಂಡ ವಿಚಕ್ಷಣಾ ದಳದ ಸಮಿತಿಯನ್ನು ರಚಿಸಿ ಕಾಲಕಾಲಕ್ಕೆ ಸಭೆ ಸೇರಿ ಸಂಬಂಧಪಟ್ಟ ವಿಷಯಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಲು ಕ್ರಮಗಳನ್ನು ಕೈಗೊಳ್ಳುವುದು.
- ಶಾಲಾ ಆಡಳಿತ ಮಂಡಳಿಯು ಶಾಲೆಯಲ್ಲಿನ ಮಕ್ಕಳ ಪೋಷಕರೊಬ್ಬರನ್ನು ಸಂಯೋಜಕರನ್ನಾಗಿ ನೇಮಿಸಿ ಮಕ್ಕಳ ಮತ್ತು ಶಾಲೆಯ ಆಗುಹೋಗುಗಳ ಬಗ್ಗೆ ರಹಸ್ಯವಾಗಿ ಆಡಳಿತ ಮಂಡಳಿಗೆ ವರದಿ ಸಲ್ಲಿಸುವಂತೆ ಕ್ರಮ ವಹಿಸುವುದು.

- ಶಾಲಾ ಆಡಳಿತ ಮಂಡಳಿಯು ಶಾಲೆಯಲ್ಲಿನ ಮಕ್ಕಳ ಮತ್ತು ಮಕ್ಕಳ ಸುರಕ್ಷತೆಯ ಬಗ್ಗೆ ಶಿಕ್ಷಕರು ಮತ್ತು ಶಾಲೆಯ ಸಿಬ್ಬಂದಿವರ್ಗದವರ ಸಭೆಯನ್ನು ಕಾಲಕಾಲಕ್ಕೆ ನಡೆಸಿ ಸಂಬಂಧಪಟ್ಟ ಸಮಸ್ಯೆಗಳ ಬಗ್ಗೆ ಚರ್ಚಿಸಿ ಅಗತ್ಯ ಪರಿಹಾರ ಕ್ರಮಗಳನ್ನು ಕೈಗೊಳ್ಳುವುದು.
- ತರಗತಿಯ ಶಿಕ್ಷಕರು ಪ್ರತಿ ವಿದ್ಯಾರ್ಥಿಯ ಊಟದ ನಂತರ ಹಾಗೂ ಶಾಲೆಯು ಮುಕ್ತಾಯವಾದ ನಂತರ ದಾಖಲಾತಿಯನ್ನು ತೆಗೆದುಕೊಳ್ಳುವುದು. ಯಾವುದಾದರೂ ವಿದ್ಯಾರ್ಥಿಯು ಶಾಲಾವಧಿಯ ಮಧ್ಯದಲ್ಲಿ ಗೈರುಹಾಜರಾಗಿದ್ದು ಕಂಡುಬಂದಲ್ಲಿ ಕೂಡಲೇ ಸಂಬಂಧಪಟ್ಟ ಪೋಷಕರಿಗೆ ಹಾಗೂ ಸಂಬಂಧಪಟ್ಟ ಪೊಲೀಸ್ ಠಾಣೆಗೆ ತಿಳಿಸಲು ಅಗತ್ಯ ಕ್ರಮ ಕೈಗೊಳ್ಳುವುದು.
- ಶಾಲಾ ಆಡಳಿತ ಮಂಡಳಿಯು ಶಾಲೆಯಲ್ಲಿ ಬಳಸುವ ವಾಹನಗಳಲ್ಲಿ ಯಾವುದೇ ಅನಧಿಕೃತ ವ್ಯಕ್ತಿಗಳು/ಶಾಲೆಗೆ ಸಂಬಂಧಪಡದೇ ಇರುವ ವ್ಯಕ್ತಿಗಳನ್ನು ಕರೆದೊಯ್ಯಬಾರದಾಗಿ ಕಟ್ಟುನಿಟ್ಟಾಗಿ ಪಾಲಿಸುವಂತೆ ಕ್ರಮ ವಹಿಸುವುದು.
- ಶಾಲಾ ಆಡಳಿತ ಮಂಡಳಿಯು ಶಾಲೆಯಲ್ಲಿ ಬಳಸುವ ವಾಹನಗಳಲ್ಲಿ ಮಕ್ಕಳನ್ನು ಯಾವ ಸ್ಥಳದಿಂದ ಶಾಲೆಗೆ ಕರೆದೊಯ್ಯುತ್ತಾರೆಯೋ ಅದೇ ಸ್ಥಳದಲ್ಲಿ/ನಿರ್ದಿಷ್ಟ ಸ್ಥಳವನ್ನು ಹೊರತುಪಡಿಸಿ ಮಧ್ಯದಲ್ಲಿ ಬೇರೆ ಯಾವುದೇ ಸ್ಥಳದಲ್ಲಿ ಮಕ್ಕಳನ್ನು ವಾಹನದಿಂದ ಇಳಿಸದಂತೆ ಕಟ್ಟುನಿಟ್ಟಾಗಿ ವಾಹನದ ಚಾಲಕ ಮತ್ತು ಸಿಬ್ಬಂದಿಗೆ ಸೂಚಿಸವುದು.
- ಬಾಲಕಿಯರ/ಮಹಿಳೆಯರಿಗಗೆ ಈ ಸಂಬಂಧದ ಯಾವುದೇ ಗೊತ್ತಿರುವ ಅಥವಾ ಗೊತ್ತಿಲ್ಲದ ವ್ಯಕ್ತಿಯ ನಡತೆಯ ಬಗ್ಗೆ ಅನುಮಾನ ಬಂದಲ್ಲಿ ಸಮಿತಿಗೆ ದೂರು ನೀಡುವಂತೆ ಜಿಲ್ಲಾ ಆಡಳಿತವು ವ್ಯಾಪಕ ಪ್ರಚಾರ ಮಾಡುವುದು.
- ವಸತಿ ಶಾಲೆಯ ವಿದ್ಯಾರ್ಥಿಗಳ ಮತ್ತು ಇತರೆ ಶಾಲೆಯ ವಿದ್ಯಾರ್ಥಿಗಳ ದೂರುಗಳು ಬಗ್ಗೆ ಸಮಿತಿಯು ಪ್ರತೀ ಮಾಹೆ ಪೋಷಕರು ಮತ್ತು ಸಿಬ್ಬಂದಿಗಳೊಂದಿಗೆ ಸಭೆ ನಡೆಸಿ ಪರಾಮರ್ಶಿಸುವುದು.

- ಜನರಹಿತ ಪ್ರದೇಶಗಳಲ್ಲಿರುವ ಶಾಲೆಗಳಿಗೆ ಸರ್ಕಾರದ ಅಧಿಕೃತ ಪರವಾನಿಗೆ ಪಡೆದಿರುವ ಭದ್ರತಾ ಏಜನ್ಸಿಯವರಿಂದ ಭದ್ರತಾ ಸಿಬ್ಬಂದಿಯನ್ನು ಅಗತ್ಯಕ್ಕೆ ತಕ್ಕಂತೆ ನೇಮಕ ಮಾಡಿಕೊಳ್ಳುವುದು.
- ಶಾಲಾ ಮಕ್ಕಳು ಮಾದಕ ವಸ್ತು ಸ್ವೀಕರಿಸಿ, ಮಾದಕ ವ್ಯಸನಿಗಳಾಗದಂತೆ ತಡೆಗಟ್ಟಲು ಶಾಲಾ ಪರಿಸರವನ್ನು ನಿರ್ವಹಿಸುವುದು.
- ಶಾಲೆಯ ಎಲ್ಲಾ ಭಾಗದಲ್ಲೂ ಬೆಳಕಿನ(ವಿದ್ಯುಚ್ಛಕ್ತಿ) ವ್ಯವಸ್ಥೆ ಕಲ್ಪಿಸವುದು.
- ಶಾಲೆಯ ಪ್ರತಿಯೊಂದು ಕೊಠಡಿ, ಶಾಲಾ ಆವರಣ/ಶಾಲಾ ಅಂಕಣದಲ್ಲಿ ಪ್ರಚಲಿತ ದೃಶ್ಯಾವಳಿಗಳನ್ನು ಸೆರೆಹಿಡಿಯುವ ಸಿ.ಸಿ. ಕ್ಯಾಮರಾಗಳನ್ನು ಅಳವಡಿಸುವುದು. ಪ್ರತಿ ಕ್ಷಣಕ್ಷಣದ ಮಾಹಿತಿಗಳನ್ನು ಗಮನಿಸಿ ವರದಿ ಮಾಡಲು ಪಾಳೀಯ ಪದ್ಧತಿಯಲ್ಲಿ ಇಬ್ಬರು ಸಿಬ್ಬಂದಿಯನ್ನು ನೇಮಕ ಮಾಡುವುದು.
- ಶಾಲಾ ವಿದ್ಯಾರ್ಥಿನಿ/ಮಹಿಳಾ ಸಿಬ್ಬಂದಿಯನ್ನು ತಮ್ಮ ವಾಸ್ತವ್ಯ ಸ್ಥಳಕ್ಕೆ ಬಿಡುವ ಸಂದರ್ಭದಲ್ಲಿ ಕಡೆಯವರನ್ನಾಗಿ ಪರಿಗಣಿಸದೆ ಮೊದಲ ಆದ್ಯತೆ ಮೇಲೆ ಅವರ ವಾಸ್ತವ್ಯಕ್ಕೆ ಬಿಡುವುದು.
- ಶಾಲಾ ಮಕ್ಕಳ ಶೈಕ್ಷಣಿಕ ಪ್ರವಾಸದಲ್ಲಿ ಇಬ್ಬರು ಮಹಿಳಾ ಶಿಕ್ಷಕರು ಮತ್ತು ಇಬ್ಬರು ಪುರುಷ ಶಿಕ್ಷಕರು ಕಡ್ಡಾಯವಾಗಿ ವಿದ್ಯಾರ್ಥಿಗಳೊಂದಿಗೆ ತೆರಳುವುದು.
- ಶಾಲಾ ಅವಧಿ ಮುಗಿದ ನಂತರ ವಿದ್ಯಾರ್ಥಿಗಳು ಒಂಟಿಯಾಗಿ ತೆರಳುವ ಬದಲು ಗುಂಪಿನಲ್ಲಿ ತೆರಳುವುದು.
- ಮಕ್ಕಳ ಸಹಾಯವಾಣಿ ಉಚಿತ ದೂರವಾಣಿ 24x7 ಸಂಖ್ಯೆ 1098 ನ್ನು ಪ್ರತಿ ಕೊಠಡಿಯಲ್ಲಿ ಪ್ರಚುರ ಪಡಿಸುವುದು. ಮಕ್ಕಳ ದಿನಚರಿ ಪುಸ್ತಕದಲ್ಲಿ ನಮೂದಿಸುವುದು.
- ಎಲ್ಲಾ ಶಾಲೆಗಳು, ವಿದ್ಯಾರ್ಥಿ ನಿಲಯಗಳಲ್ಲಿ ಹಾಗೂ ವಸತಿ ಶಾಲೆಗಳಲ್ಲಿ ಸಂದರ್ಶಿಸುವ ಸಂದರ್ಶಕರ ಹೆಸರು ಮತ್ತು ವಿಳಾಸಗಳನ್ನು ದಾಖಲಿಸುವುದು.
- ಶಾಲೆಗಳು ಇಲಾಖಾ ನಿಗಧಿತ ಶಾಲಾ ಸಮಯವನ್ನು ಪಾಲಿಸುವುದು.

- ಶಾಲಾ ಆಡಳಿತ ವರ್ಗ, ಶಿಕ್ಷಕರು, ಶಿಕ್ಷಕೇತರ ಸಿಬ್ಬಂದಿಗಳು ಮತ್ತು ಸೇವೆಗಳನ್ನು ಒದಗಿಸುವವರು ಇವರಿಗೆ ಪಾಕ್ಸೋ ಕಾಯ್ದೆ 2012ರ ಬಗ್ಗೆ ಅರಿವು ಕಾರ್ಯಾಗಾರಗಳನ್ನು ಕಡ್ಡಾಯವಾಗಿ ಹಮ್ಮಿಕೊಳ್ಳುವುದು.
- ಮಕ್ಕಳಿಗೆ ನಿಲುಕುವಂತಹ ಎತ್ತರದಲ್ಲಿ ದೂರು/ಸಲಹಾ ಪೆಟ್ಟಿಗೆಗಳನ್ನು ಹಾಕುವುದು, ವಾರಕ್ಕೊಂದು ಸಲ ಶಾಲಾ ಸುರಕ್ಷಿತ ಸಮಿತಿಯು ಪರಿಶೀಲಿಸಿ ಕ್ರಮ ಕೈಗೊಳ್ಳುವುದು.
- ಸಿಬ್ಬಂದಿ ಹಾಗೂ ಶಾಲೆಗೆ ಸೇವೆ ಒದಗಿಸುತ್ತಿರುವವರ ಅಂದರೆ ಬಾಲಕರು, ಆಯಾ, ಆಹಾರ ವಿತರಕರು, ಅಡುಗೆಯವರು, ಆಯಾ ಸ್ವಚ್ಚತಾ ಸಿಬ್ಬಂದಿ, ಭದ್ರತಾ ಸಿಬ್ಬಂದಿ ಇವರಿಗೆ ಗುರುತಿನ ಚೀಟಿಗಳನ್ನು ನೀಡುವುದು ಹಾಗೂ ಅವರ ಭಾವ ಚಿತ್ರಗಳನ್ನು ವಿವರಗಳನ್ನು ಶಾಲಾ ಸೂಚನಾಫಲಕದಲ್ಲಿ ಹಾಕುವುದು.
- ಎಲ್ಲಾ ಮಕ್ಕಳಿಗೆ ವಯಸ್ಸಿಗನುಗುಣವಾಗಿ ವೈಯಕ್ತಿಕ ಸುರಕ್ಷತೆ ಮತ್ತು ದೌರ್ಜನ್ಯಗಳ ಬಗ್ಗೆ ತಿಳಿಸಿಕೊಡುವುದು (Safe and Unsafe Touch).
- ಶಿಕ್ಷಕರು ಮತ್ತು ಆಡಳಿತ ಮಂಡಳಿ, ಶಾಲೆ ಬಿಟ್ಟನಂತರ, ರಜೆದಿನಗಳಲ್ಲಿ ವೈಯಕ್ತಿಕವಾಗಿ ವಿದ್ಯಾರ್ಥಿಗಳೊಂದಿಗೆ ಶಿಕ್ಷಣ, ಪಠ್ಯೇತರ ಚಟುವಟಿಕೆಗಳಿಗೆ ಸಂಬಂಧಿಸಿದ ವಿಷಯಗಳಲ್ಲದೆ ಬೇರೆ ವಿಷಯಗಳ ಬಗ್ಗೆ ಒಂಟಿಯಾಗಿ, ನಿರ್ಜನ ಪ್ರದೇಶಗಳಲ್ಲಿ ವ್ಯವಹರಿಸತಕ್ಕದ್ದಲ್ಲ.
- ಶಾಲೆಯಲ್ಲಿ ಅವಘಡಗಳು ಉಂಟಾಗಬಹುದಾದ ಭೌತಿಕ ಸ್ಥಳಗಳನ್ನು (ಕಟ್ಟಡ, ಪಡಸಾಲೆ, ಹೊರಗೆ ಹೋಗುವ ಮತ್ತು ಬರುವ ದ್ವಾರಗಳು, ದಾಸ್ತಾನು ಕೊಠಡಿ, ಬೆಂಕಿ, ನೀರಿನ ತೊಟ್ಟಿ, ಮೋಟಾರ್/ಜನರೇಟರ್ ಕೊಠಡಿ, ಗ್ರಂಥಾಲಯ, ಪ್ರಯೋಗಾಲಯ, ಅಡುಗೆ ಕೋಣೆ, ಬಾಲ್ಕನಿ, ಪ್ಯಾರಪಟ್ ಗೋಡೆ, ತೆರೆದ ಚರಂಡಿ ಇತ್ಯಾದಿ) ಗುರುತು ಮಾಡಬೇಕು.
- ಯಾವುದೇ ಅಹಿತಕರ ಘಟನೆಗಳಿಗೆ ಸಂಬಂಧಪಟ್ಟಂತೆ ಸ್ಥಳೀಯ ಪೊಲೀಸ್ ಠಾಣೆಗಳಲ್ಲಿ ಸುರಕ್ಷತೆಗಾಗಿ ಸಂಪರ್ಕಿಸುವುದು.

ಮಕ್ಕಳ ಸುರಕ್ಷ ಯೋಜನೆ ಮತ್ತು ಕ್ರಿಯಾ ಯೋಜನೆ (Child Safety / Protection Plan and Action Plan)

1. ಪ್ರತಿ ಶಾಲೆಯಲ್ಲಿ, ಪ್ಲೇಹೋಂಗಳಲ್ಲಿ, ಮಾಂಟೆಸರಿ ಶಾಲೆಗಳಲ್ಲಿ, ಸರ್ಕಾರಿ ಶಾಲೆ/ವಸತಿ ನಿಲಯಗಳಲ್ಲಿ ಖಾಸಗಿ ಶಾಲೆ, ಸ್ವಯಂ ಸೇವಾ ಸಂಸ್ಥೆಗಳಲ್ಲಿ, ಧಾರ್ಮಿಕ ಮತ್ತು ಧರ್ಮ ಸಂಸ್ಥೆಗಳಲ್ಲಿ, ಅನುದಾನಿತ ಸಂಸ್ಥೆಗಳಲ್ಲಿ, 'ಮಕ್ಕಳ ಸುರಕ್ಷ ಯೋಜನೆ' ಯನ್ನು ಸಿದ್ಧಪಡಿಸುವುದು.
2. ಸುರಕ್ಷ ಯೋಜನೆಯು ಮಗುವಿನ ಒಳಿತಿನ ಸುರಕ್ಷತೆಯನ್ನು ಒದಗಿಸುವ ದೃಷ್ಟಿಯೊಂದಿರುತ್ತದೆ.
3. ಪ್ರತಿ ಶಾಲೆಯು ಸಂಸ್ಥೆಗೆ ತಾತ್ಕಾಲಿಕ ಅಥವಾ ಖಾಯಂ ಸಿಬ್ಬಂದಿ ನೇಮಕ ಮಾಡಿಕೊಳ್ಳಬೇಕಾದ ಸಂದರ್ಭದಲ್ಲಿ ಅಭ್ಯರ್ಥಿ ಹೊಂದಿರಬೇಕಾದ ಮಾನದಂಡಗಳ ಬಗ್ಗೆ ಸ್ಪಷ್ಟಪಡಿಸತಕ್ಕದ್ದು.
4. ಪ್ರತಿ ಶಾಲೆಯು ಪೋಷಕ/ಶಿಕ್ಷಕ ಸಮಿತಿಯನ್ನು ಕಡ್ಡಾಯವಾಗಿ ರಚಿಸುವುದು, (ಮೊದಲನೇ ಪುಟದ ಕಡೇ ಪ್ಯಾರದಂತೆ)
5. ಮಕ್ಕಳ ಸುರಕ್ಷಾ ಯೋಜನೆ ಮಗುವಿನ ಸುರಕ್ಷತೆಗೆ ಸಂಬಂಧಿಸಿದಂತೆ ತೆಗೆದುಕೊಳ್ಳಬೇಕಾದ ಕ್ರಮಗಳು ಮತ್ತು ತುರ್ತು ಸಂದರ್ಭಗಳಲ್ಲಿ (ಗಂಭೀರ ಅಥವಾ ಗಂಭೀರವಲ್ಲದ ಪ್ರಕರಣಗಳಲ್ಲೂ) ಕೈಗೊಳ್ಳಬೇಕಾದ ಕ್ರಮಗಳನ್ನು ವಿವರಿಸತಕ್ಕದ್ದು.
6. ಶಾಲಾ ಸಿಬ್ಬಂದಿ ಮತ್ತು ಆಡಳಿತ ಮಂಡಳಿ ಅನುಸರಿಸಬೇಕಾದ ನಿಯಮ ಹಾಗೂ ಮಾರ್ಗಸೂಚಿಗಳನ್ನು ಸ್ಪಷ್ಟಪಡಿಸತಕ್ಕದ್ದು.
7. ಸುರಕ್ಷಾ ಯೋಜನೆಯ ಪೋಷಕರ ಮತ್ತು ಮಕ್ಕಳ ಜವಾಬ್ದಾರಿಯನ್ನು ಸ್ಪಷ್ಟಪಡಿಸತಕ್ಕದ್ದು ಹಾಗೂ ಈ ಬಗ್ಗೆ ಪೋಷಕ ಮತ್ತು ಶಿಕ್ಷಕರ ಸಭೆಗಳಲ್ಲಿ ನಿಯಮಿತವಾಗಿ ಚರ್ಚಿಸುವುದು. ಹಾಗೂ ಅಗತ್ಯ ಕ್ರಮ ವಹಿಸುವುದು.
8. ಶಾಲೆಯ ಮಕ್ಕಳ ರಕ್ಷಣಾ ಅಧಿಕಾರಿ ಅಥವಾ ಸಮಾಲೋಚಕರು, ಘಟನೆ ನಡೆದಿದ್ದಲ್ಲಿ ಅಥವಾ ಘಟನೆ ನಡೆಯಬಹುದಾದ ಸನ್ನಿವೇಶಗಳಲ್ಲಿ ವರದಿಯನ್ನು ಕೂಡಲೇ ಸಿದ್ಧಪಡಿಸಿ ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿಗಳಿಗೆ, ಜಿಲ್ಲಾ ಶಿಕ್ಷಣ ಅಧಿಕಾರಿಗಳು ಮತ್ತು ತಮ್ಮ

ಕಾರ್ಯವ್ಯಾಪ್ತಿಯ ಪೊಲೀಸ್ ಠಾಣೆಯ ಮಕ್ಕಳ ಕಲ್ಯಾಣ ಅಧಿಕಾರಿಗೆ ಸಲ್ಲಿಸುವುದು.

9. ಇಂತಹ ಸನ್ನಿವೇಶಗಳ ಬಗ್ಗೆ ತುರ್ತುಕ್ರಮ ತೆಗೆದುಕೊಳ್ಳುವುದು.

ಅ) ಮಗು ಯಾವುದಾದರೂ ಶಾಲೆಗೆ ಸಂಬಂಧಿಸಿದ ಅಥವಾ ಸಂಬಂಧ ಇಲ್ಲದ ವ್ಯಕ್ತಿಯ ಬಗ್ಗೆ ದೈಹಿಕ/ಲೈಂಗಿಕ ದೌರ್ಜನ್ಯಗಳ ಬಗ್ಗೆ ದೂರು ನೀಡಿದ್ದಲ್ಲಿ,

ಆ) ಮಗುವಿನ ವರ್ತನೆ, ಪ್ರಗತಿಯಲ್ಲಿ ಬದಲಾವಣೆ ಕಂಡು ಬಂದಲ್ಲಿ ಹಾಗೂ ದೇಹದಲ್ಲಿ ಗಾಯಗಳು ಆಗಿದ್ದಲ್ಲಿ,

ಇ) ಶಾಲೆಯ ಒಳಗೆ ಅಥವಾ ಹೊರಗೆ ಚುಡಾಯಿಸಿದಲ್ಲಿ/ರ್‍ಯಾಗಿಂಗ್ ಮಾಡಿದಲ್ಲಿ,

ಶಾಲೆಗಳಲ್ಲಿ ಮಕ್ಕಳ ಸುರಕ್ಷಾ ಯೋಜನೆ ರಚನೆ ಮತ್ತು ಅನುಷ್ಠಾನದ ಕುರಿತು ಸಕ್ಷಮ ಪ್ರಾಧಿಕಾರದಿಂದ ನೇಮಿಸಲ್ಪಟ್ಟ ತಜ್ಞರ ಸಮಿತಿಯಿಂದ ನಿಯಮಿತವಾಗಿ ಪರಿಶೀಲನೆ ಮಾಡುವುದು. ಸದರಿಯವರಿಗೆ ಶಾಲೆಗಳಿಗೆ ಭೇಟಿ ನೀಡಲು ಮತ್ತು ಸಿಬ್ಬಂದಿ ಮತ್ತು ಮಕ್ಕಳೊಡನೆ ಸಂಭಾಷಿಸಲು, ಮಕ್ಕಳ ಸಂಕಷ್ಟ ಪರಿಸ್ಥಿತಿಯ ಅಂಶಗಳ ಬಗ್ಗೆ ಪರಿಶೀಲಿಸಲು ಜವಾಬ್ದಾರಿ ನೀಡಲಾಗುವುದು.

ಪೊಲೀಸ್ ಇಲಾಖೆಯಿಂದ ಕೈಗೊಳ್ಳಬೇಕಾದ ಕ್ರಮಗಳು:

- ತಮ್ಮ ಠಾಣಾ ವ್ಯಾಪ್ತಿಗೆ ಬರುವಂತಹ ಶಾಲೆಗಳ ಆಡಳಿತ ಮಂಡಳಿಗಳ ಮತ್ತು ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿವರ್ಗದವರ ವಿಳಾಸ/ದೂರವಾಣಿ ವಿವರಗಳನ್ನು ಠಾಣೆಯಲ್ಲಿ ಸಂಗ್ರಹಿಸುವುದು.
- ಶಾಲೆಗಳಲ್ಲಿ ಮಕ್ಕಳ ಮೇಲೆ ನಡೆಯುವಂತಹ ಯಾವುದೇ ಮಾನಸಿಕ ಮತ್ತು ದೈಹಿಕ ಶಿಕ್ಷೆ/ದೌರ್ಜನ್ಯ/ಲೈಂಗಿಕ ಕಿರುಕುಳ/ಮುಂತಾದ ಅಹಿತಕರ ಘಟನೆಗಳು ಸಂಭವಿಸಿದಾಗ ಕೂಡಲೇ ಸಂಬಂಧಿಸಿದ ಶಾಲೆಗೆ ಭೇಟಿ ನೀಡಿ, ಪರಿಶೀಲಿಸಿ ತ್ವರಿತ ಕ್ರಮ ಕೈಗೊಳ್ಳುವುದು.

- ಪೊಲೀಸ್ ಠಾಣೆಗಳಿಗೆ ಮಕ್ಕಳಿಂದ/ಪೋಷಕರಿಂದ ಮತ್ತು ಮಹಿಳಾ ಸಿಬ್ಬಂದಿಯಿಂದ ಶಾಲೆ ಮತ್ತು ಮಕ್ಕಳ ಕುರಿತು ಬರುವ ದೂರುಗಳನ್ನು ಕೂಡಲೇ ಸ್ವೀಕರಿಸಿ, ಪರಿಶೀಲಿಸಿ ತ್ವರಿತ ಕ್ರಮ ಕೈಗೊಳ್ಳುವುದು.
- ಪೊಲೀಸ್ ಸಿಬ್ಬಂದಿಯು ಸಾರ್ವಜನಿಕ ಸ್ಥಳಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಂದರ್ಭದಲ್ಲಿ ಶಾಲಾ ವಿದ್ಯಾರ್ಥಿಗಳ ಮೇಲೆ ಕಿರುಕುಳ/ಚುಡಾಯಿಸುವುದು/ಲೈಂಗಿಕ ಪ್ರಚೋದನೆ ಮುಂತಾದ ಘಟನೆಗಳು ಕಂಡುಬಂದಲ್ಲಿ ಸ್ಥಳದಲ್ಲಿಯೇ ಈ ಬಗ್ಗೆ ಕ್ರಮವಹಿಸುವುದು.
- ಮಕ್ಕಳಿಂದ ದೂರು ಬಂದ ಸಂದರ್ಭದಲ್ಲಿ ಮಗುವಿನ ಮಾಹಿತಿಯನ್ನು ಬಹಿರಂಗ ಪಡಿಸದೇ ಅಥವಾ ವೈಯಕ್ತಿಕವಾಗಿ ಪರಿಗಣಿಸದೇ ಸಂಬಂಧಪಟ್ಟ ಸಿಬ್ಬಂದಿ ಮೇಲೆ ವಿಚಾರಣೆ ನಡೆಸಿ ಕ್ರಮ ಕೈಗೊಳ್ಳುವುದು.

ಶಾಲಾ ವಾಹನಗಳ ನಿರ್ವಹಣೆ:

- ಶಾಲಾ ವಾಹನಗಳು ಕಡ್ಡಾಯವಾಗಿ ಹಳದಿ ಬಣ್ಣದಲ್ಲಿರಬೇಕು.
- ಶಾಲಾ ವಾಹನಗಳ ಹಿಂದೆ ಹಾಗೂ ಮುಂಭಾಗ ಬಾಡಿಗೆಗೆ ಪಡೆದುಕೊಂಡ ವಾಹನವಾಗಿದ್ದಲ್ಲಿ 'ಸ್ಕೂಲ್ ಡ್ಯೂಟಿ ಮೇಲೆ' ಎಂದು ಸ್ಪಷ್ಟವಾಗಿ ನಮೂದಿಸಬೇಕು.
- ಶಾಲಾ ವಾಹನದಲ್ಲಿ ಪ್ರಥಮ ಚಿಕಿತ್ಸೆ ಬಾಕ್ಸ್ ಇರಬೇಕು.
- ಶಾಲಾ ವಾಹನದಲ್ಲಿ ನಿರ್ಧಿಷ್ಟಪಡಿಸಿದ ಗುಣಮಟ್ಟದ ವೇಗದ ಗೌರ್ನರ್ ಅಳವಡಿಸಬೇಕು.
- ವಾಹನದ ಕಿಟಕಿಗಳಲ್ಲಿ ಸಮತಲ ಗ್ರಿಲ್‌ಗಳನ್ನು ಅಳವಡಿಸಿರಬೇಕು.
- ವಾಹನದಲ್ಲಿ ಬೆಂಕಿ ನಂದಿಸುವ ಅಗ್ನಿ ಶಾಮಕ ಇರಬೇಕು.
- ಶಾಲೆಯ ಹೆಸರು ಮತ್ತು ದೂರವಾಣಿ ಸಂಖ್ಯೆಯನ್ನು ವಾಹನದ ಮೇಲೆ ಬರೆಯಬೇಕು.
- ವಾಹನದ ಬಾಗಿಲುಗಳಿಗೆ ವಿಶ್ವಾಸಾರ್ಹ ಬೀಗಗಳನ್ನು ಅಳವಡಿಸಿರಬೇಕು.
- ಶಾಲಾ ಮಕ್ಕಳನ್ನು ನೋಡಿಕೊಳ್ಳಲು ವಾಹನದಲ್ಲಿ ಒಬ್ಬ ಅಟೆಂಡರ್ ಇರಬೇಕು.

- ವಿದ್ಯಾರ್ಥಿಗಳ ತಂದೆ/ತಾಯಿ ಪೋಷಕರು/ಶಾಲಾ ಶಿಕ್ಷಕರು ವಾಹನದಲ್ಲಿನ ಸುರಕ್ಷತಾ ಕ್ರಮಗಳನ್ನು ಖಚಿತಪಡಿಸಿಕೊಳ್ಳಲು ವಾಹನದಲ್ಲಿ ಕುಳಿತು ಪ್ರಯಾಣಿಸಬಹುದು.

ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ-2009ರ ನಿಯಮ 16 ಮತ್ತು 17(1) & (2) ರಲ್ಲಿ ಯಾವುದೇ ಮಗುವಿನ ನಿಂದನೆಯನ್ನು ಯಾವ ಸಂದರ್ಭಗಳಲ್ಲೂ ಮಾಡತಕ್ಕದ್ದಲ್ಲ ಎಂದು ತಿಳಿಸಿದೆ. ಮಕ್ಕಳಿಗೆ ದೈಹಿಕವಾಗಿ, ಮಾನಸಿಕವಾಗಿ ಶಿಕ್ಷೆ ನೀಡುವುದು, ತಾರತಮ್ಯ ಎಸಗುವುದು, ಲೈಂಗಿಕ ನಿಂದನೆ ಮಾಡುವುದು ತಪ್ಪು ಎಂದು ಸಹ ತಿಳಿಸಲಾಗಿದೆ. ಈ ರೀತಿ ಮಾಡುವವರ ಮೇಲೆ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು.

ಮಕ್ಕಳ ತೀವ್ರತರವಾದ ಲೈಂಗಿಕ ಅಪರಾಧಗಳಿಗೆ ಇರುವ ಕಠಿಣ ಶಿಕ್ಷೆ (ಪೋಕ್ಸೋ ಕಾಯಿದೆ 2012) ಅನ್ವಯ ಶಿಕ್ಷೆ ವಿಧಿಸಲಾಗುವುದು.

ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಅಧಿನಿಯಮ 2012 ಅಧ್ಯಾಯ 2ರಲ್ಲಿ ಮಕ್ಕಳ ಮೇಲೆ ಲೈಂಗಿಕ ಅಪರಾಧಗಳನ್ನು ಶೈಕ್ಷಣಿಕ ಅಥವಾ ಧಾರ್ಮಿಕ ಸಂಸ್ಥೆಯ ಆಡಳಿತ ವರ್ಗ ಅಥವಾ ಸಿಬ್ಬಂದಿ ಯಾರಾದರೂ ಆ ಸಂಸ್ಥೆಯಲ್ಲಿರುವ ಮಗುವಿನ ಮೇಲೆ ಎಸಗಿದ್ದಲ್ಲಿ ಅಂತಹ ಅಪರಾಧವನ್ನು ಗುರುತರ/ತೀವ್ರತರವಾದ ಅಪರಾಧವೆಂದು ಪರಿಗಣಿಸಿ ಈ ಕೆಳಗಿನಂತೆ ಶಿಕ್ಷೆ ವಿಧಿಸಲಾಗುವುದು.

ಪ್ರವೇಶಿಕ ಲೈಂಗಿಕ ಅತ್ಯಾಚಾರ (ಸೆಕ್ಷನ್ 5,ಎಫ್)	ಸೆಕ್ಷನ್ 6 ರಂತೆ 10 ವರ್ಷಗಳಿಗೆ ಕಡಿಮೆ ಇಲ್ಲದ ಕಠಿಣ ಶಿಕ್ಷೆ ಅಥವಾ ಜೀವಾವಧಿಗೆ ವಿಸ್ತರಿಸಬಹುದಾದ ಕಾರಾಗೃಹವಾಸ ಶಿಕ್ಷೆ ಮತ್ತು ಜುಲ್ಮಾನೆ
ಲೈಂಗಿಕ ಹಲ್ಲೆ (ಸೆಕ್ಷನ್ 9)	ಸೆಕ್ಷನ್ 10 ರಂತೆ 5 ವರ್ಷಗಳಿಗೆ ಕಡಿಮೆ ಇಲ್ಲದ ಕಠಿಣ ಶಿಕ್ಷೆ ಅಥವಾ 7 ವರ್ಷದವರೆಗೆ ವಿಸ್ತರಿಸಬಹುದಾದ ಕಾರಾಗೃಹವಾಸ ಶಿಕ್ಷೆ ಮತ್ತು ಜುಲ್ಮಾನೆ
ಲೈಂಗಿಕ ಕಿರುಕುಳ (ಸೆಕ್ಷನ್ 11)	ಸೆಕ್ಷನ್ 12 ರಂತೆ 3 ವರ್ಷದ ವರೆಗೆ ವಿಸ್ತರಿಸಬಹುದಾದ ಹಾಗೂ ಕಾರಾಗೃಹವಾಸ ಶಿಕ್ಷೆ ಮತ್ತು ಜುಲ್ಮಾನೆ (ಎರಡರಲ್ಲೊಂದು ಬಗೆ)
ಕಾಮಪ್ರಚೋದಕ (ಅಶ್ಲೀಲ ಚಿತ್ರಣ) ಉದ್ದೇಶಕ್ಕಾಗಿ ಮಗುವನ್ನು	ಸೆಕ್ಷನ್ 14 ರಂತೆ 5 ವರ್ಷದವರೆಗೆ ವಿಸ್ತರಿಸಬಹುದಾದ ಎರಡರಲ್ಲೊಂದು ಬಗೆಯ ಕಾರಾವಾಸ ಶಿಕ್ಷೆ ಹಾಗೂ ಜುಲ್ಮಾನೆ ಹಾಗೂ ಎರಡನೆಯ ಅಥವಾ ತರುವಾಯದ ಅಪರಾಧಕ್ಕಾಗಿ 7 ವರ್ಷದವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆ ಹಾಗೂ ಜುಲ್ಮಾನೆ

ಬಳಸಿಕೊಳ್ಳುವುದು (ಸೆಕ್ಷನ್ 13)	
	ಕಾಯ್ದೆಯಡಿಯಲ್ಲಿ ಪ್ರಚೋದನೆಯ ಉದ್ದೇಶಗಳಿಗಾಗಿ ಹಾಗೂ ಇಂತಹ ದೂರುಗಳನ್ನು ದಾಖಲಿಸದೇ ಇದ್ದಲ್ಲಿ ಶಿಕ್ಷೆಗೆ ಅವಕಾಶ ಮಾಡಲಾಗಿದೆ. (ಸೆಕ್ಷನ್ 21)

ಖಾಸಗಿ ಶಾಲಾ ಆಡಳಿತ ಮಂಡಳಿಗಳು ಸಂಪೂರ್ಣವಾಗಿ ತಮ್ಮ ಸಂಸ್ಥೆಯ ವ್ಯಾಪ್ತಿಯ ಶಾಲೆಗಳಲ್ಲಿ ಉತ್ತಮ ಪರಿಸರ ನಿರ್ಮಾಣ ಮಾಡಲು ಮತ್ತು ಮೇಲೆ ವಿವರಿಸಿರುವ ಎಲ್ಲಾ ಅಂಶಗಳ ಬಗ್ಗೆ ಕಟ್ಟುನಿಟ್ಟಿನ ಕ್ರಮವಹಿಸಲು ನಿರ್ದೇಶಿಸಿದೆ. ಈ ರೀತಿಯ ಅಹಿತಕರ ಘಟನೆ/ಪ್ರಕರಣ ನಡೆಯದಂತೆ ಸೂಕ್ತ ಕ್ರಮ ವಹಿಸಲು ಮತ್ತೊಮ್ಮೆ ಸೂಚಿಸಿದೆ.

ಸಹಿ/-

ಆಯುಕ್ತರು

ಸಾರ್ವಜನಿಕ ಶಿಕ್ಷಣ ಇಲಾಖೆ

ಗೆ:

1. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ
4. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ಮುಂದಿನ ಕ್ರಮಕ್ಕಾಗಿ
5. ರಾಜ್ಯದ ಎಲ್ಲಾ ಉಪನಿರ್ದೇಶಕರು(ಅಭಿವೃದ್ಧಿ), ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಮುಂದಿನ ಕ್ರಮಕ್ಕಾಗಿ
6. ರಾಜ್ಯದ ಎಲ್ಲಾ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರವರಿಗೆ ಮುಂದಿನ ಕ್ರಮಕ್ಕಾಗಿ

7. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ರವರಿಗೆ ಉಪನಿರ್ದೇಶಕರು(ಆಡಳಿತ) ರವರ ಮುಖಾಂತರ ಮುಂದಿನ ಕ್ರಮಕ್ಕಾಗಿ.

ಪ್ರತಿಯನ್ನು:

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಮತ್ತು ಧಾರವಾಡ ವಿಭಾಗ ಇವರಿಗೆ ಕಳುಹಿಸುತ್ತಾ ಅಗತ್ಯ ಕ್ರಮವಹಿಸಲು ಸೂಚಿಸಿದೆ.
2. ಸಹ ನಿರ್ದೇಶಕರು, ಬೆಂಗಳೂರು ಮತ್ತು ಮೈಸೂರು ವಿಭಾಗ ರವರಿಗೆ ಕಳುಹಿಸುತ್ತಾ ತಮ್ಮ ವ್ಯಾಪ್ತಿಯ ಜಿಲ್ಲೆಗಳಲ್ಲಿ ಈ ಬಗ್ಗೆ ಪರಿಶೀಲಿಸಲು ತಿಳಿಸಿದೆ.
3. ಕಛೇರಿ ಪ್ರತಿ.

ಅನುಬಂಧ-1

ಶಾಲೆಗಳಲ್ಲಿ ಮಕ್ಕಳ ಸುರಕ್ಷ ಯೋಜನೆಯನ್ನು ಪರಿಶೀಲಿಸಲು ಜಿಲ್ಲಾ ಮಟ್ಟದಲ್ಲಿ ತಜ್ಞರ ಸಮಿತಿ ಶಾಲೆಗಳಲ್ಲಿ ಮಕ್ಕಳ ಸುರಕ್ಷತೆಯನ್ನು ಪರಿಶೀಲಿಸಲು ಪ್ರತಿ ಶಾಲೆಯಲ್ಲಿ ಮಕ್ಕಳ ಸುರಕ್ಷಾ ಯೋಜನೆಯನ್ನು ರಚಿಸಿ ಕ್ರಿಯಾ ಯೋಜನೆಯನ್ನು ರೂಪಿಸಿ ಅನುಷ್ಠಾನ ಮಾಡಬೇಕಾಗಿದೆ. ಸದರಿ ಯೋಜನೆಯ ಅನುಷ್ಠಾನ ಕುರಿತು ನಿಯಮಿತವಾಗಿ ಪರಿಶೀಲನೆ ಮಾಡಲು ಜಿಲ್ಲಾ ಮಟ್ಟದಲ್ಲಿ ತಜ್ಞರ ಸಮಿತಿಯನ್ನು ಈ ಕೆಳಕಂಡಂತೆ ರಚಿಸಲಾಗಿದೆ.

1. ಜಿಲ್ಲಾ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ
2. ಜಿಲ್ಲಾ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
3. ಜಿಲ್ಲಾ ಆರೋಗ್ಯ ಅಧಿಕಾರಿಗಳು
4. ಡೆಪ್ಯೂಟಿ ಸೂಪರ್ ಇನ್‌ಟೆಂಡೆಂಟ್ ಆಫ್ ಪೊಲೀಸ್ (DYSP)

5. ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿಗಳು
6. ಶಿಕ್ಷಣಾಧಿಕಾರಿಗಳು/ವಿಷಯ ಪರಿವೀಕ್ಷಕರು(ಉಪನಿರ್ದೇಶಕರ ಕಛೇರಿ)
7. ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು
8. ತಾಲ್ಲೂಕು ಶಿಶು ಅಭಿವೃದ್ಧಿ ಅಧಿಕಾರಿಗಳು
9. ತಾಲ್ಲೂಕು ಮಟ್ಟ ಪೊಲೀಸ್ ಅಧಿಕಾರಿಗಳು
10. ಶಿಕ್ಷಣ ಸಂಯೋಜಕರು (ಬಿ.ಇ.ಒ. ಕಛೇರಿ)
11. ಮಕ್ಕಳ ಕಲ್ಯಾಣ ಸಮಿತಿ ಸದಸ್ಯರುಗಳು
12. ಬಾಲ ನ್ಯಾಯ ಮಂಡಳಿ ಸದಸ್ಯರುಗಳು
13. ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ರಕ್ಷಣಾ ಅಧಿಕಾರಿಗಳು
14. ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿಗಳು (ಮಕ್ಕಳ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕಿಗೆ ಒಂದು ಸಂಸ್ಥೆ ಗುರುತಿಸಬಹುದಾಗಿದೆ)

ಸಮಿತಿಯಲ್ಲಿನ ಸದಸ್ಯರಲ್ಲಿ 4 ರಿಂದ 5 ಸದಸ್ಯರನ್ನೊಳಗೊಂಡಂತೆ ತಂಡ ರಚಿಸಿಕೊಂಡು ಶಾಲೆಗಳಿಗೆ ಭೇಟಿ ನೀಡಿ ನಿಯಮಿತವಾಗಿ ಪರಿಶೀಲಿಸುವುದು.

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು–560001

ಸಂಖ್ಯೆ:ಸಿ7(2)ಪ್ರಾ.ಶಿ.ಅ./ಶಾ.ಮ.ಲೈ.ಕಿ.40/2014–15 ದಿನಾಂಕ:26.09.2014

:: ಸುತ್ತೋಲೆ ::

ವಿಷಯ : ರಾಜ್ಯದ ಸರ್ಕಾರಿ ಮತ್ತು ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಮಕ್ಕಳ ಸುರಕ್ಷತೆಯ ಬಗ್ಗೆ.

ಉಲ್ಲೇಖ: 1) ರಾಜ್ಯದ ಉಚ್ಚ ನ್ಯಾಯಾಲಯ ರಿ.ಪಿ.ಸಂಖ್ಯೆ:41196–208/2014 ದಿ:17.09.2014 ರ ತೀರ್ಪು.

2) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ: ಸಿ7(2) ಪ್ರಾ.ಶಿ.ಅ.ಲೈ.ಕಿ.40/2014–15 ದಿ:23.07.2014.

3) ಬೆಂಗಳೂರು ನಗರ ಪೊಲೀಸ್ ಆಯುಕ್ತರು, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು ರವರ ಆದೇಶ ಸಂಖ್ಯೆ:157ಎಂಎಜಿ(1) ಇತರೆ/2014 ದಿ:26.07.2014

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯದ ಶಾಲಾ ಮಕ್ಕಳ ಮೇಲೆ ಇತ್ತೀಚಿನ ದಿನಗಳಲ್ಲಿ ಲೈಂಗಿಕ ಕಿರುಕುಳದಂತಹ ಪ್ರಕರಣಗಳು ಹೆಚ್ಚಾಗಿದ್ದು, ಈ ಕುರಿತು ಮಾಧ್ಯಮಗಳಲ್ಲಿ ವರದಿಗಳು ಬರುತ್ತಿವೆ. ಸಾರ್ವಜನಿಕರು, ಮಕ್ಕಳ ಪೋಷಕರು ಈ ಬಗ್ಗೆ ತುಂಬಾ ಆತಂಕ ಪಡುತ್ತಿದ್ದು, ಮಕ್ಕಳ ಸುರಕ್ಷತೆಯನ್ನು ಮಾಡುವುದು ಇಲಾಖೆಯ ಹಾಗೂ ಶಾಲೆಯ ಆದ್ಯ ಕರ್ತವ್ಯವಾಗಿದೆ. ಈ ಹಿನ್ನೆಲೆಯಲ್ಲಿ ಉಲ್ಲೇಖ(2)ರಲ್ಲಿ

ಕೈಗೊಳ್ಳಲು ರಾಜ್ಯದ ಎಲ್ಲಾ ಖಾಸಗಿ ಸಂಸ್ಥೆಗಳ ಆಡಳಿತ ಮಂಡಳಿಗಳಿಗೆ ತಿಳಿಸಲಾಗಿತ್ತು.

ಹಾಗೆಯೇ ಉಲ್ಲೇಖ (3)ರಲ್ಲಿ ಬೆಂಗಳೂರು ನಗರ ಪೋಲೀಸ್ ಆಯುಕ್ತರು, ಬೆಂಗಳೂರು ನಗರ ವ್ಯಾಪ್ತಿಯ ಖಾಸಗಿ ಶಾಲೆಗಳಲ್ಲಿ ಮಕ್ಕಳ ಸುರಕ್ಷತೆಯ ಕುರಿತು ಶಾಲಾ ಆಡಳಿತ ಮಂಡಳಿಗಳು ಅಳವಡಿಸಿಕೊಳ್ಳಬೇಕಾದ ಕ್ರಮದ ಬಗ್ಗೆ ಆದೇಶವನ್ನು ಹೊರಡಿಸಿ ದಿ: 31.08.2014 ರೊಳಗಾಗಿ ಅನುಷ್ಠಾನಗೊಳಿಸಬೇಕೆಂದು ಆದೇಶಿಸಿರುತ್ತಾರೆ.

ಏತನ್ಮಧ್ಯೆ, ಉಲ್ಲೇಖ(3)ರ ಸುತ್ತೋಲೆಯನ್ನು ಪ್ರಶ್ನಿಸಿ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಸಂಘವು ಘನ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು (ರಿಟ್ ಪಿಟಿಷನ್: 41196–41208/2014) ಪ್ರಕರಣವು ದಿ:17.09.2014 ರಂದು ವಿಚಾರಣೆಗೆ ಬಂದ ಸಂದರ್ಭದಲ್ಲಿ ಘನ ನ್ಯಾಯಾಲಯವು ಮಕ್ಕಳ ಸುರಕ್ಷತಾ ಕ್ರಮವನ್ನು ಖಾಸಗಿ ಅನುದಾನರಹಿತ ಶಾಲೆಗಳ ಜೊತೆಗೆ ಅನುದಾನಿತ ಹಾಗೂ ಸರ್ಕಾರಿ ಶಾಲೆಗಳಲ್ಲಿಯೂ ಸಹ ಅಳವಡಿಸಿಕೊಳ್ಳುವಂತೆ ಆದೇಶಿಸಿದೆ.

ಉಲ್ಲೇಖ (2)ರ ಸುತ್ತೋಲೆಯಲ್ಲಿ ರಾಜ್ಯದ ಎಲ್ಲಾ ಶಾಲೆಗಳ ಮಕ್ಕಳ ಸುರಕ್ಷತೆಯ ಬಗ್ಗೆ ಪ್ರಸ್ತಾಪಿಸಲಾಗಿತ್ತು. ಇದೀಗ ಸರ್ಕಾರಿ ಶಾಲಾ ಮಕ್ಕಳಿಗೆ ಹಾಗೂ ಮಕ್ಕಳ ಪೋಷಕರಿಗೆ ಗುರುತಿನ ಚೀಟಿಯನ್ನು 6 ವಾರಗಳಲ್ಲಿ ವಿತರಿಸಲು ಪ್ರಸ್ತಾಪಿತ ಪ್ರಕರಣದಲ್ಲಿ ಘನ ನ್ಯಾಯಾಲಯವು ಆದೇಶಿಸಿರುವುದರಿಂದ ಈ ಸಂಬಂಧ ಜಿಲ್ಲಾ ಉಪನಿರ್ದೇಶಕರು ಸಂಬಂಧಪಟ್ಟ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಹಾಗೂ ಶಾಲಾ ಮುಖ್ಯಸ್ಥರಿಗೆ ತ್ವರಿತವಾಗಿ ಅಗತ್ಯ ನಿರ್ದೇಶನ ನೀಡುವುದು ಮತ್ತು ಅನುಸರಣೆ ಸಂಬಂಧ ನಿಗಾ ವಹಿಸುವುದು.

ಮುಂದುವರಿದು ಖಾಸಗಿ ಅನುದಾನರಹಿತ ಮತ್ತು ಅನುದಾನಸಹಿತ ಶಾಲೆಗಳಲ್ಲಿಯೂ ಸುರಕ್ಷತಾ ಕ್ರಮಗಳನ್ನು ದಿ:31.10.2014 ರೊಳಗಾಗಿ ಅಳವಡಿಸಿಕೊಳ್ಳಲು ಘನ ನ್ಯಾಯಾಲಯವು ಆದೇಶಿಸಿದೆ. ನ್ಯಾಯಾಲಯದ

ಆದೇಶವು ಸಮಗ್ರವಾಗಿ ಅನುಷ್ಠಾನವಾಗಬೇಕಾಗಿದೆ. ತಪ್ಪಿದಲ್ಲಿ ನ್ಯಾಯಾಲಯದ ನಿಂದನೆ ಪ್ರಕರಣಗಳು ಎದುರಗಾಗುವ ಸಾಧ್ಯತೆಯಿದ್ದು, ಇಲಾಖೆಯು ಮುಜುಗರ ಅನುಭವಿಸುವ ಪ್ರಸಂಗ ಎದುರಾಗಬಹುದು. ಪ್ರಯುಕ್ತ ಶಾಲೆಗಳಲ್ಲಿ ಎಲ್ಲಾ ರೀತಿಯ ಸುರಕ್ಷತಾ ಕ್ರಮಗಳು ಜಾರಿಯಾಗತಕ್ಕದ್ದು. ಮತ್ತು ಆದೇಶ ಪಾಲಿಸದ ಶಾಲೆಗಳ ವಿರುದ್ಧ ಜಿಲ್ಲಾ ಉಪನಿರ್ದೇಶಕರು ಹಾಗೂ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು ಕರ್ನಾಟಕ ಶಿಕ್ಷಣ ಕಾಯಿದೆ ನಿಯಮಾವಳಿಗಳಂತೆ ಅಗತ್ಯ ಕ್ರಮ ವಹಿಸುವುದು.

ಈಗಾಗಲೇ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮತ್ತು ರಾಜ್ಯದ ಎಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಉಲ್ಲೇಖ (2)ರ ಸುತ್ತೋಲೆಯನ್ನು ಕಳುಹಿಸಲಾಗಿದ್ದು, ಸದರಿ ಸುತ್ತೋಲೆಯನ್ವಯ ಜಿಲ್ಲಾಡಳಿತವು ಅಗತ್ಯ ಕ್ರಮ ವಹಿಸಬೇಕಾಗಿದೆ. ಅಲ್ಲದೇ ಈ ಸಂಬಂಧ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ ಸುರಕ್ಷತಾ ಕ್ರಮಗಳನ್ನು ಅನುಸರಿಸಲಾಗಿರುವ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮ ವಹಿಸಲು ಕೋರಿದೆ.

ರಾಜ್ಯದ ಎಲ್ಲಾ ಶಾಲಾ ಮಕ್ಕಳ ಸುರಕ್ಷತೆಯನ್ನು ಕಾಯುವಲ್ಲಿ ಇಲಾಖೆಯು ಜಿಲ್ಲಾ ಆಡಳಿತದ ಹಾಗೂ ಪೊಲೀಸ್ ಇಲಾಖೆಯ ಸಹಕಾರವನ್ನು ಕೋರುತ್ತದೆ.

ಸಹಿ/-
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಗೆ:

1. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ

3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ
4. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಮತ್ತು ಧಾರವಾಡ ವಿಭಾಗ ಇವರಿಗೆ ಕಳುಹಿಸುತ್ತಾ ಅಗತ್ಯ ಕ್ರಮವಹಿಸಲು ಸೂಚಿಸಿದೆ.
5. ಸಹ ನಿರ್ದೇಶಕರು, ಬೆಂಗಳೂರು ಮತ್ತು ಮೈಸೂರು ವಿಭಾಗ ರವರಿಗೆ ಕಳುಹಿಸುತ್ತಾ ತಮ್ಮ ವ್ಯಾಪ್ತಿಯ ಜಿಲ್ಲೆಗಳಲ್ಲಿ ಈ ಬಗ್ಗೆ ಪರಿಶೀಲಿಸಲು ತಿಳಿಸಿದೆ.
6. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ಮುಂದಿನ ಕ್ರಮಕ್ಕಾಗಿ
7. ರಾಜ್ಯದ ಎಲ್ಲಾ ಉಪನಿರ್ದೇಶಕರು(ಅಭಿವೃದ್ಧಿ), ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಮುಂದಿನ ಕ್ರಮಕ್ಕಾಗಿ
8. ರಾಜ್ಯದ ಎಲ್ಲಾ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರವರಿಗೆ ಮುಂದಿನ ಕ್ರಮಕ್ಕಾಗಿ
9. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ರವರಿಗೆ ಉಪನಿರ್ದೇಶಕರು(ಆಡಳಿತ) ರವರ ಮುಖಾಂತರ ಮುಂದಿನ ಕ್ರಮಕ್ಕಾಗಿ.
10. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001

ಸಂಖ್ಯೆ:ಸಿ7(2)ಪ್ರಾ.ಶಿ.ಅ./ಶಾ.ಮ.ಲೈ.ಕಿ.40/2014-15 ದಿನಾಂಕ:05.11.2014

:: ಸುತ್ತೋಲೆ ::

ವಿಷಯ : ರಾಜ್ಯದ ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಮೇಲೆ ಲೈಂಗಿಕ ಕಿರುಕುಳ/ಅತ್ಯಾಚಾರ ಹಾಗೂ ದೈಹಿಕ ಹಿಂಸೆ ನಡೆಯುತ್ತಿರುವುದನ್ನು ತಡೆಗಟ್ಟುವ ಬಗ್ಗೆ.

ಉಲ್ಲೇಖ: ಈ ಕಛೇರಿ ಪತ್ರದ ಸಮ ಸಂಖ್ಯೆ: ದಿನಾಂಕ:23.07.2014

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಇತ್ತೀಚಿಗೆ ಶಾಲಾ ಕಾಲೇಜುಗಳಲ್ಲಿ ಮಕ್ಕಳ ಮತ್ತು ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ, ದೈಹಿಕ ಹಿಂಸೆ ಹಾಗೂ ಅತ್ಯಾಚಾರದ ಪ್ರಕರಣಗಳು ವರದಿಯಾದ ಹಿನ್ನೆಲೆಯಲ್ಲಿ ಉಲ್ಲೇಖ(1)ರಂತೆ ಸುರಕ್ಷತಾ ಕ್ರಮಗಳ ಬಗ್ಗೆ ಸುತ್ತೋಲೆಯನ್ನು ಈಗಾಗಲೇ ನೀಡಲಾಗಿದೆ. ಆದಾಗ್ಯೂ ಸದರಿ ಪ್ರಕರಣಗಳು ಮರುಕಳಿಸುತ್ತಿದ್ದು ಸಂಪೂರ್ಣವಾಗಿ ಸದರಿ ಪ್ರಕರಣಗಳನ್ನು ತಡೆಗಟ್ಟುವಿಕೆ ಮತ್ತು ಸುರಕ್ಷತಾ ಕ್ರಮಗಳ ಅನುಷ್ಠಾನಕ್ಕಾಗಿ ರಾಜ್ಯದ ಎಲ್ಲಾ ಶಾಲೆಗಳಲ್ಲಿ ಪರಿಶೀಲನೆಗೆ ಒಳಪಡಿಸಲು ತೀರ್ಮಾನಿಸಿದ್ದು, ಜಿಲ್ಲಾ ಹಂತದ ಉಪನಿರ್ದೇಶಕರು ನೋಡಲ್ ಅಧಿಕಾರಿಗಳಾಗಿ ತಾಲ್ಲೂಕು/ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳ ನೇತೃತ್ವದಲ್ಲಿ ಬಿ.ಆರ್.ಸಿ. ಅಕ್ಷರ ದಾಸೋಹ ಸಹಾಯಕ ನಿರ್ದೇಶಕರು, ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು, ಬಿ.ಆರ್.ಪಿ. ಶಿಕ್ಷಣ ಸಂಯೋಜಕರು, ಹಾಗೂ ಸಿ.ಆರ್.ಪಿ.ಗಳನ್ನೊಳಗೊಂಡ ತ್ರಿಸದಸ್ಯ ಸಮಿತಿಯ ತಂಡಗಳನ್ನು ಅಗತ್ಯಕ್ಕನುಸಾರವಾಗಿ ರಚಿಸಿಕೊಂಡು ಎಲ್ಲಾ ಶಾಲೆಗಳನ್ನು

ತಪಾಸಣೆಗೊಳಪಡಿಸಿ ಈ ಪತ್ರಕ್ಕೆ ಅಡಕಗೊಳಿಸಿರುವ ನಮೂನೆಯಲ್ಲಿ ಆನ್‌ಲೈನ್ ಮೂಲಕ ದಿನಾಂಕ: 29.11.2014ರೊಳಗೆ ಸಲ್ಲಿಸಲು ತಿಳಿಸಿದೆ. ಹಾರ್ಡ್ ಕಾಪಿಯನ್ನು ಪುಸ್ತಕ ರೂಪದಲ್ಲಿ ಸ್ಪೈರಲ್ ಬೈಂಡಿಂಗ್ ಮಾಡಿಸಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ದೃಢೀಕರಣದೊಂದಿಗೆ ದ್ವಿಪ್ರತಿಯಲ್ಲಿ ಸಲ್ಲಿಸುವುದು. (ಒಂದು ಪ್ರತಿ ನಿರ್ದೇಶಕರು, ಪ್ರಾಥಮಿಕ ಶಿಕ್ಷಣ ಮತ್ತು ಒಂದು ಪ್ರತಿ ನಿರ್ದೇಶಕರು, ಪ್ರೌಢ ಶಿಕ್ಷಣ).

ಕ್ಷೇತ್ರ ಶಿಕ್ಷಣಾಧಿಕಾರಿಗಳು ನಿಖರ ಪರಿಶೀಲನೆ ಹಾಗೂ ನಿಖರ ಮಾಹಿತಿಯ ಕ್ರೋಢೀಕರಣಕ್ಕೆ ಪರಿಶೀಲನಾ ತಂಡಗಳಿಗೆ ಅಗತ್ಯ ತಿಳುವಳಿಕೆ, ಮಾರ್ಗದರ್ಶನ, ಹಾಗೂ ಅಗತ್ಯವಿದ್ದಲ್ಲಿ ತರಬೇತಿಯನ್ನು ನೀಡುವುದು.

ತನಿಖಾ ತಂಡವು ಶಾಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಶಾಲೆಯ ಮಕ್ಕಳ ಸುರಕ್ಷಾ ಸಮಿತಿ/ಪೋಷಕ ಸಮಿತಿಯ ಪದಾಧಿಕಾರಿಗಳು ಅಥವಾ ಸದಸ್ಯರುಗಳ ಪೈಕಿ ಇಬ್ಬರ ಉಪಸ್ಥಿತಿಯೊಂದಿಗೆ ಪರಿಶೀಲನಾ ಕಾರ್ಯವನ್ನು ನಡೆಸುವುದು. ಮೂಲ ದಾಖಲೆಗಳನ್ನು ಪರಿಶೀಲಿಸಿ ಮುಖ್ಯ ಶಿಕ್ಷಕರು/ಕಾರ್ಯದರ್ಶಿಯಿಂದ ದೃಢೀಕರಿಸಿದ ನಕಲು ಪ್ರತಿಗಳನ್ನು ಪಡೆದು ನಮೂನೆಯನ್ನು ತುಂಬುವುದು. ತಪ್ಪು ಮಾಹಿತಿ ನೀಡಿದಲ್ಲಿ ಸಂಬಂಧಿಸಿದ ಉಪನಿರ್ದೇಶಕರು/ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದು.

ಸರ್ಕಾರಕ್ಕೆ ಸದರಿ ಮಾಹಿತಿಯನ್ನು ನಿಗದಿತ ಸಮಯದಲ್ಲಿ ಒದಗಿಸಬೇಕಾಗಿರುವುದರಿಂದ ವಿಳಂಬಕ್ಕೆ ಅವಕಾಶವಿಲ್ಲವೆಂದು ತಿಳಿಸಿದೆ.

ಸಹಿ/-
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಗೆ:

1. ರಾಜ್ಯದ ಎಲ್ಲಾ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ

2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ

ಪ್ರತಿಯನ್ನು:

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಮತ್ತು ಧಾರವಾಡ
2. ಕಛೇರಿ ಪ್ರತಿ.

ರಾಜ್ಯದ ಅನುದಾನಿತ/ಅನುದಾನದರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಮೇಲೆ ಲೈಂಗಿಕ ಕಿರುಕುಳ/ಅತ್ಯಾಚಾರ ಹಾಗೂ ದೈಹಿಕ ಹಿಂಸೆ ನಡೆಯುತ್ತಿರುವುದನ್ನು ತಡೆಗಟ್ಟುವ ಕುರಿತು ತ್ರಿಸದಸ್ಯ ಸಮಿತಿ ಪರಿಶೀಲಿಸಿ ವರದಿ ನೀಡಬೇಕಾದ ನಮೂನೆ

ಕ್ರ ಸಂ.	ವಿಷಯ	ಪರಿಶೀಲಿಸಿದ ವಿವರಗಳು
1	ಶಾಲೆಯ ಹೆಸರು ವಿಳಾಸ ಮತ್ತು ಡೈಸ್ ಕೋಡ್ (ಆಡಳಿತ ಮಂಡಳಿ ಯಾವ ವರ್ಗಕ್ಕೆ ಸೇರಿದೆ)	
2	ಶಾಲೆ ಪ್ರಾರಂಭಿಸಲು ಇಲಾಖೆಯಿಂದ ಅನುಮತಿ ಪಡೆಯಲಾಗಿದೆಯೇ ಆದೇಶ ಸಂಖ್ಯೆ ಮತ್ತು ದಿನಾಂಕ (ವಿವರ ನೀಡುವುದು) ಅ) ಪೂರ್ವ ಪ್ರಾಥಮಿಕ ಆ) ಪ್ರಾಥಮಿಕ 1 ರಿಂದ 5ನೇ ತರಗತಿ	

	ಇ) 06 ರಿಂದ 08ನೇ ತರಗತಿ ಈ) 09 ರಿಂದ 10ನೇ ತರಗತಿ	
3	ಶಾಲೆಯ ನೋಂದಣಿ (ಶಿಕ್ಷಣ ಕಾಯ್ದೆಯಂತೆ ಮಾಡಲಾಗಿದೆಯೇ ವಿವರ ನೀಡವುದು) ಅ) ಪೂರ್ವ ಪ್ರಾಥಮಿಕ ಆ) ಪ್ರಾಥಮಿಕ 1 ರಿಂದ 5ನೇ ತರಗತಿ ಇ) 06 ರಿಂದ 08ನೇ ತರಗತಿ ಈ) 09 ರಿಂದ 10ನೇ ತರಗತಿ	
4	ಆರ್.ಟಿ.ಇ. ಅಡಿಯಲ್ಲಿ ಶಾಲೆಯನ್ನು ನೋಂದಾಯಿಸಲಾಗಿದೆಯೇ? (ಪ್ರತಿ ಲಗತ್ತಿಸುವುದು) ಅ) ಪೂರ್ವ ಪ್ರಾಥಮಿಕ ಆ) ಕಿರಿಯ ಪ್ರಾಥಮಿಕ	
5	ಶಾಲೆಯು ಪ್ರಾಥಮಿಕ ಮಾನ್ಯತೆ ಪಡೆದಿದೆಯೇ ಪಡೆದಿದ್ದಲ್ಲಿ ಆದೇಶ ಸಂಖ್ಯೆ ಮತ್ತು ದಿನಾಂಕ ನಂತರ ಮಾನ್ಯತೆ ನವೀಕರಿಸಲಾಗಿದೆಯೇ? (ಹಾಗಿದ್ದಲ್ಲಿ ಎಲ್ಲಿಯವರೆಗೆ ನವೀಕರಿಸಲಾಗಿದೆ) ಅ) ಪೂರ್ವ ಪ್ರಾಥಮಿಕ ಆ) ಪ್ರಾಥಮಿಕ 1 ರಿಂದ 5ನೇ ತರಗತಿ ಇ) 06 ರಿಂದ 08ನೇ ತರಗತಿ ಈ) 09 ರಿಂದ 10ನೇ ತರಗತಿ	

6	ಶಾಲೆಯಲ್ಲಿ ಬೋಧಿಸುತ್ತಿರುವ ಮಾಧ್ಯಮ ಯಾವ ಮಾಧ್ಯಮದಲ್ಲಿ ಬೋಧಿಸಲು ಅನುಮತಿ ಪಡೆಯಲಾಗಿದೆ. ಅ) 1 ರಿಂದ 5ನೇ ತರಗತಿ ಆ) 06 ರಿಂದ 08ನೇ ತರಗತಿ ಇ) 09 ರಿಂದ 10ನೇ ತರಗತಿ (ಆದೇಶ ಮತ್ತು ದಿನಾಂಕ, ಪ್ರತಿ ಶಾಲೆಯ ಮಾಧ್ಯಮವಾರು/ಪಠ್ಯಕ್ರಮವಾರು ಪ್ರತ್ಯೇಕ ನಮೂನೆಗಳಲ್ಲಿ ಮಾಹಿತಿ ಒದಗಿಸುವುದು)	
7	ಶಾಲೆಯು ಯಾವ ಪಠ್ಯಕ್ರಮ ಮಾದರಿಗೆ ಸಂಬಂಧಿಸಿದ್ದಾಗಿದೆ ಅ) 1 ರಿಂದ 5ನೇ ತರಗತಿ ಆ) 06 ರಿಂದ 08ನೇ ತರಗತಿ ಇ) 09 ರಿಂದ 10ನೇ ತರಗತಿ 1. ರಾಜ್ಯ ಪಠ್ಯಕ್ರಮ (ರಾಜ್ಯ ಪಠ್ಯಕ್ರಮ ಪುಸ್ತಕಗಳನ್ನು ಖರೀದಿ ಮಾಡಿರುತ್ತಾರೆಯೇ) 2. ಐ.ಸಿ.ಎಸ್.ಸಿ. (ಸರ್ಕಾರದಿಂದ ನಿರಾಕ್ಷೇಪಣಾ ಪಡೆಯಲಾಗಿದೆಯೇ) 3. ಸಿ.ಬಿ.ಎಸ್.ಸಿ. (ಸರ್ಕಾರದಿಂದ ನಿರಾಕ್ಷೇಪಣಾ ಪಡೆಯಲಾಗಿದೆಯೇ) (ಪಡೆದಿದ್ದಲ್ಲಿ ವಿವರ ನೀಡುವುದು)	

	4. ಐ.ಸಿ.ಎಸ್.ಸಿ./ಸಿ.ಬಿ.ಎಸ್.ಸಿ. ಅನುಮತಿ ಪಡೆದಿದ್ದಲ್ಲಿ ಮಂಡಳಿಗೆ ಸಂಯೋಜನೆ ಪಡೆದಿದೆಯೇ? ಪಡೆಯದಿದ್ದಲ್ಲಿ ಯಾವ ಸಾಲಿನಲ್ಲಿ ಪಡೆಯಬೇಕಾಗಿತ್ತು ಆದೇಶದ ಪ್ರತಿಯನ್ನು ಮುಖ್ಯ ಶಿಕ್ಷಕರಿಂದ ದೃಢೀಕರಿಸಿ ಮುಖ್ಯ ಶಿಕ್ಷಕರಿಂದ ದೃಢೀಕರಿಸಿ ಪಡೆಮುಕೊಳ್ಳುವುದು)	
8	ಶಾಲೆಗೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗಿದೆಯೇ 1. ಸಿಸಿಟಿವಿ ಅಳವಡಿಸಿದೆಯೇ? (ಶಾಲೆಯ ಕಟ್ಟಡದ ಹೊರಗೆ ಮತ್ತು ಕೊಠಡಿಗಳ ಒಳಗಡೆ ಅಗತ್ಯವಿರುವಷ್ಟು ಅಳವಡಿಸಲಾಗಿದೆಯೇ? ಸುಸಜ್ಜಿತವಾಗಿ ಕಾರ್ಯನಿರ್ವಹಿಸುತ್ತಿವೆಯೇ?) 2. ಅಗ್ನಿನಂದಕ ಅಳವಡಿಸಿದೆಯೇ? 3. ಬಹುಮಹಡಿ ಕಟ್ಟಡ ಆಗಿದ್ದಲ್ಲಿ ಸುರಕ್ಷತೆ ಗ್ರಿಲ್ ಅಳವಡಿಸಿದೆಯೇ? 4. ಶಾಲೆಯ ಮಕ್ಕಳ ಸುರಕ್ಷಾ ಯೋಜನೆ ಮತ್ತು ಕ್ರಿಯಾ ಯೋಜನೆ ತಯಾರಿಸಲಾಗಿದೆಯೇ?	
9	ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶಾಲೆಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆಯೇ ಶಾಲೆಯ ಕಟ್ಟಡ ಆರ್.ಸಿ.ಸಿ. ಶೀಟು, ಹೆಂಚಿನದೇ ಸ್ವಂತದ್ದೇ/ಬಾಡಿಗೆಯೇ/ಭೋಗ್ಯವೇ(ಮಾಹಿತಿ ನೀಡುವುದು) ಕುಡಿಯುವ ನೀರು ಶೌಚಾಲಯ (ಪ್ರತ್ಯೇಕವಾಗಿ ಗಂಡು ಮತ್ತು ಹೆಣ್ಣು ಮಕ್ಕಳ ಸಂಖ್ಯೆಗೆ	

	ಅನುಗುಣವಾಗಿ ನಿರ್ಮಿಸಲಾಗಿದೆಯೇ/ಇಲ್ಲವೇ ಆಟದ ಮೈದಾನ ಶೈಕ್ಷಣಿಕವಾಗಿ ಮಕ್ಕಳು ಕಲಿಯಲು ಗ್ರಂಥಾಲಯ ಹೊಂದಿದೆಯೇ? ಪೀಠೋಪಕರಣಗಳು/ಪಾಠೋಪಕರಣಗಳನ್ನು ಒದಗಿಸಲಾಗಿದೆಯೇ? ಕಾಂಪೌಂಡ್ ನಿರ್ಮಿಸಲಾಗಿದೆಯೇ?	
10	ಶಾಲೆಯಲ್ಲಿ ಮಕ್ಕಳ ಹಾಜರಾತಿ ಮತ್ತು ದಾಖಲಾತಿ ಮಾಧ್ಯಮವಾರು/ತರಗತಿವಾರು (ಪ್ರತಿ ತರಗತಿಗೆ ತಲೆ ಎಣಿಕೆ ಮಾಡಿದಾಗ)	
11	ಶಾಲೆಯಲ್ಲಿ ನೇಮಿಸಿಕೊಂಡಿರುವ ಶಿಕ್ಷಕರುಗಳ ಮಾಹಿತಿ ನಿಗದಿತ ವಿದ್ಯಾರ್ಹತೆ ಹೊಂದಿರುವ ಬಗ್ಗೆ ಮಾಹಿತಿ ಅ) ಶಿಕ್ಷಕರ ಹೆಸರು ಮತ್ತು ವಿದ್ಯಾರ್ಹತೆ ಆ) ಬೋಧಕೇತರ ಸಿಬ್ಬಂದಿ ಮಾಹಿತಿ (ಪ್ರತ್ಯೇಕವಾಗಿರಲಿ)	
12	ಪೋಲೀಸ್ ಪರಿವೀಕ್ಷಣೆ ಆಗಿದೆಯೇ/ಇಲ್ಲವೇ (ಈ ಕಛೇರಿ ಸುತ್ತೋಲೆ ದಿ:23.07.2014 ರಂತೆ)	
13	ಶಾಲೆಯಲ್ಲಿ ಪೋಷಕ ಸಮಿತಿ/ಮಕ್ಕಳ ಸುರಕ್ಷಾ ಸಮಿತಿ ರಚಿಸಲಾಗಿದೆಯೇ?	
14	ಶಾಲಾ ಕಟ್ಟಡದ ಎಲಿವೇಶನ್ ಭಾವಚಿತ್ರದ ಪ್ರತಿಯನ್ನು ತನಿಖಾ ತಂಡದೊಂದಿಗೆ ತೆಗೆಸಿದ ಒಂದೇ ಭಾವಚಿತ್ರದ ಪ್ರತಿ	
15	ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ/	

	ಬೋಧಕೇತರ ಸಿಬ್ಬಂದಿಗೆ ಸುರಕ್ಷತಾ ಕ್ರಮಗಳ ಬಗ್ಗೆ ತಿಳುವಳಿಕೆ ನೀಡಲಾಗಿದೆಯೇ?	
16	ಶಾಲಾ ಸಿಬ್ಬಂದಿಗೆ ಸೇವಾ ಭದ್ರತೆ ಒದಗಿಸಲಾಗಿದೆಯೇ? ಪ್ರತಿ ಶಿಕ್ಷಕರ/ಸಿಬ್ಬಂದಿಯ ಬ್ಯಾಂಕ್ ಹೆಸರು ಮತ್ತು ಖಾತೆ ಸಂಖ್ಯೆ ನೀಡುವುದು	
17	ಪ್ರತಿ ವಿದ್ಯಾರ್ಥಿಗೆ ಮಾಧ್ಯಮವಾರು/ತರಗತಿವಾರು ನಿಗದಿಪಡಿಸಿರುವ ಶುಲ್ಕದ ವಿವರ	
18	ಸಂದರ್ಶನ ಸಮಿತಿಯ ಅಭಿಪ್ರಾಯ	
19	ಸಂದರ್ಶನ ಸಮಿತಿ ಶಾಲೆಗೆ ಭೇಟಿ ನೀಡಿದ ದಿನಾಂಕ:	

:ದೃಢೀಕರಣ:

ಶಾಲೆಗೆ ಭೇಟಿ ನೀಡಿ ನಮೂನೆಯಲ್ಲಿನ ಪ್ರತಿಯೊಂದು ಅಂಶಗಳ ಬಗ್ಗೆ ದಾಖಲೆಗಳನ್ನು ಪರಿಶೀಲಿಸಿ ಮಾಹಿತಿಯು ಪಡೆಯಲಾಗಿದೆ ಮತ್ತು ಕ್ರಮಬದ್ಧವಾಗಿದೆ ಎಂದು ದೃಢೀಕರಿಸಿದೆ.

ಸಂದರ್ಶನ ಸಮಿತಿಯ ಸದಸ್ಯರ ಸಹಿ ಹೆಸರು, ಹುದ್ದೆ ಮತ್ತು ಮೊಹರು

ಶಾಲೆಯ ಮುಖ್ಯಶಿಕ್ಷಕರ ಸಹಿ ಹೆಸರು, ಹುದ್ದೆ ಮತ್ತು ಮೊಹರು

1.

2.

3.

ಮಕ್ಕಳ ಪೋಷಕ ಸಮಿತಿ/ಹಿತರಕ್ಷಣಾ ಸಮಿತಿ

ಸದಸ್ಯರ ಸಹಿ ಮತ್ತು ಮೊಹರು

1.

2.

ಕ್ಷೇತ್ರ ಶಿಕ್ಷಣಾಧಿಕಾರಿಗಳು

....

ತಾಲ್ಲೂಕು ವಲಯ

....ಜಿಲ್ಲೆ

ANVGJ: W.P. Nos. 41196-208/2014 & 41857/14(GM-POLICE)
17.09.2014

ORDER

Heard learned advocates appearing on both sides and the interim report filed on 16.09.2014, by Sri A.S.Ponnanna, learned Addl. Advocate General.

Pursuant to the order passed on 03.09.2014, an interim report was submitted by the Nodal Officer, appointed by the 2nd respondent, in the matter of steps taken towards implementation of the guidelines in Annexure-Z8.

In view of the observations made on 16.09.2014 in respect of the BBMP Schools, Sri M. Lakshminarayana, IAS, Commissioner, BBMP is present. He was represented by Mr. Sandip Patil, learned advocate. The Commissioner, BBMP, submitted that necessary action for implementation of the guidelines in Annexure-Z8, in so far as they are applicable to the Schools run by the BBMP, would be taken and the same would be in place in about two months' time. Submission made by the Commissioner, BBMP, stands recorded. He shall take effective measures to give effect to the guidelines in Annexure-Z8, to the extent they are applicable to the BBMP Schools, if necessary, by appointing a Nodal Officer in the BBMP, to effectively monitor the implementation process, since the BBMP is having large number of Schools. The Nodal Authority, upon appointment, shall conduct ward-wise meetings with the heads of the BBMP Schools, draw action plan for implementation of the

guidelines within the period, school-wise, shall be fled on the next hearing date.

Sri S. Basavaraj, learned advocate for the petitioners, filed affidavit of Sri D. Shashikumar, Secretary of the 2nd petitioner. Though certain statements have been made in the said affidavit, for the present, there is no need to pass order in that regard.

The Nodal Officer appointed by the 2nd respondent and jurisdictional police are required to adopt measures for the 'course correction'. They should adopt 'hand-shake method' with the Management of the Schools in the matter of phase-wise implementation of the guidelines in Annexure-Z8. It is open to the Nodal Officer to hold meetings zone-wise/ward-wise, to avoid unnecessary crowding of the representatives of the Management of Schools. The jurisdictional educational officers of the respective wards/zones, shall be involved in such meetings. The proceedings of the meetings shall be recorded and follow-up action taken.

Mr. Mohammed Mohsin, IAS, the Commissioner for Public Instructions is present. He assured that necessary orders would be obtained from the Government and CC TVs would be installed in all the Government Schools in a phased manner and at the earliest possible period. I do hope and trust that the concerned Departments of the Government would release the grant to enable the Commissioner for Public Instructions, to take effective steps in the matter of installation of CC TVs in Government Schools, at least, before the end of November, 2014, since there is urgent need for such installation in the interest of students and the parents, mostly

women folk, who visit Schools for the purpose of either dropping or picking the children or for interaction with the teaching faculty.

The Commissioner for Public Instructions, shall issue immediate instructions in the matter of issuing I.D. Cards, in terms of guidelines 7(a) of Annexure-Z8 and shall ensure that the Heads of all the Government Schools shall complete the process of issue of such I.D. Cards within a period of 6 weeks, in as much as, the Government would not be spending any sum in that regard and the respective Schools should make the arrangements for issue of the I.D. Cards, the cost of which shall be borne by the parents of the ward/s.

Sri S. Basavaraj submitted that petitioners 4 to 14, would implement all the guidelines in Annexure-Z8, except those appearing at Serial Nos. 1 & 9, within one month period and at any event, before 31st October, 2014. Petitionerss 4 to 14 shall act accordingly.

Nodal Officer should take note of the statements made in the Court on behalf of the petitioners, BBMP and the Government. He is at liberty to adopt such course of action as may be necessary for the effective implementation of the guidelines in Annexure-Z8 and also the Circular dated 23.07.2014, webhosted by the Department of Public Instructions. The Schools are at liberty to download the said circular and initiate measures for compliance thereof.

Nodal Officer is at liberty to take the assistance of Officers/Officials of other Government Departments and the BBMP, in the matter of conducting of the meetings from time to time. The

2nd respondent shall provide all the assistance required to the Nodal Officer in the matter of taking steps for achieving the object behind the issuance of Annexure-Z8.

Though cases have been registered against certain Schools, for the present, charge-sheets shall not be filed by the jurisdictional police, since, time for implementation of the guidelines is extended. However, if there is no co-operation and if there is any persistent defiance by the Management of the Schools in the matter of phased implementation of guidelines in Annexure-Z8, within the extended period, as above, the jurisdictional police shall register the cases and conduct the investigation upto the stage of filling of charge-sheet. If there is non compliance by the Managements of the School/s, further orders re: filing of charge-sheet/s would be passed on the next hearing date.

Adjourned to 03.11.2014 for further orders.

Copies of this order be furnished to Sri S. Basavaraj, learned advocate for the petitioners and Sri A. S. Ponnanna, learned Addl. Advocate General and Sri Sandeep Patil, learned advocate for BBMP.

Sd/-

JUDGE

ಅನುಬಂಧ-3

ಕರ್ನಾಟಕ ಸರ್ಕಾರದ ನಡುವಳಿಗಳು

ವಿಷಯ : ಮಕ್ಕಳ ಸುರಕ್ಷತಾ ಕ್ರಮದ ಹಿನ್ನೆಲೆಯಲ್ಲಿ ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಸಿ.ಸಿ.ಟಿ.ವಿ. ಅಳವಡಿಸುವ ಬಗ್ಗೆ ತಗಲುವ ವೆಚ್ಚದ ಪ್ರಸ್ತಾವನೆ.

ಉಲ್ಲೇಖ: ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯ ರಿ.ಪಿ.ಸಂಖ್ಯೆ: 41196-208/2014 ದಿ:17.09.2014

* * * * *

ಪ್ರಸ್ತಾವನೆ:

ಮೇಲೆ ಓದಲಾದ ಪ್ರಸ್ತಾವನೆಯಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು, ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯ ರಿ.ಪಿ.ಸಂಖ್ಯೆ: 41196-208/2014. ದಿನಾಂಕ:17.09.2014. ಆದೇಶದಂತೆ ಮಕ್ಕಳ ಸುರಕ್ಷತಾ ಕ್ರಮದ ಹಿನ್ನೆಲೆಯಲ್ಲಿ ರಾಜ್ಯದ ಸರ್ಕಾರಿ ಕಿರಿಯ/ಹಿರಿಯ ಮತ್ತು ಪ್ರೌಢಶಾಲೆಗಳಲ್ಲಿ ಸಿ.ಸಿ.ಟಿ.ವಿ. ಅಳವಡಿಸುವ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಮಾನ್ಯ ರಾಜ್ಯ ಉಚ್ಚನ್ಯಾಯಾಲಯವು ಆದೇಶ ನೀಡಿದೆ. ಮಾನ್ಯ ಉಚ್ಚ ನ್ಯಾಯಾಲಯದ ಆದೇಶವನ್ನು ರಾಜ್ಯದ ಎಲಾ ಬಾಲಕಿಯರ ಸರ್ಕಾರಿ ಕಿರಿಯ, ಹಿರಿಯ ಮತ್ರು ಪ್ರೌಢಶಾಲೆಗಳಿಗೆ ಅಳವಡಿಸಲು 2013-14ನೇ ಸಾಲಿನ ಡೈಸ್ ಮಾಹಿತಿ ಆಧರಿಸಿ ಪ್ರತಿಯೊಂದು ಶಾಲೆಗೆ ತಗಲುವ ವೆಚ್ಚದ ವಿವರವನ್ನು ನೀಡಿ ಮೊದಲ ಹಂತದಲ್ಲಿ ಅಂದಾಜು ₹ 6.11ಕೋಟಿ ಅನುದಾನ ಬಿಡುಗಡೆ ಮಾಡಲು ಕೋರಿದ್ದಾರೆ. ಹಾಗೂ ಎರಡನೇ ಹಂತದಲ್ಲಿ ₹ 52.92ಕೋಟಿ ವೆಚ್ಚವಾಗುವುದಾಗಿ ಪ್ರಸ್ತಾವನೆ ಸಲ್ಲಿಸಿದ್ದು,

ಸರ್ಕಾರಿ ಶಾಲೆಗಳಿಗೆ ಸಿ.ಸಿ.ಟಿ.ವಿ. ಅಳವಡಿಸಲು ಸರ್ಕಾರದ ಅನುಮತಿ ಮತ್ತು ಸಿ.ಸಿ.ಟಿ.ವಿ. ಅಳವಡಿಸುವ ಸಂಸ್ಥೆಗಳಿಗೆ 15 ದಿನಗಳ ಅಲ್ಪಾವಧಿ ಟೆಂಡರ್ ಕರೆಯಲು ಆದೇಶ ನೀಡಲು ಕೋರಿದ್ದಾರೆ.

ಸರ್ಕಾರವು ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ನೀಡಿದೆ.

ಸರ್ಕಾರಿ ಆದೇಶ ಸಂಖ್ಯೆ: ಇಡಿ 206 ಯೋಯೋಕ 2014, ಬೆಂಗಳೂರು, ದಿನಾಂಕ:02.12.2014

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ಬೆಂಗಳೂರು ನಗರಕ್ಕೆ ಸೀಮಿತಗೊಳಿಸಿ 200 ಕ್ಕಿಂತ ಹೆಚ್ಚು ಹೆಣ್ಣು ಮಕ್ಕಳು ವ್ಯಾಸಂಗ ಮಾಡುತ್ತಿರುವ ಪ್ರಾಥಮಿಕ ಶಾಲೆಗಳಿಗೆ ಮಾತ್ರ ಮೊದಲ ಹಂತದಲ್ಲಿ ಸಿ.ಸಿ.ಟಿ.ವಿ.ಗಳನ್ನು (ತಲಾ ನಾಲ್ಕರಂತೆ) ಹಾಗೂ ಅವುಗಳಿಗೆ ಸಂಬಂಧಿಸಿದ ಪರಿಕರಗಳನ್ನು ಮಾತ್ರ ಈ ಕೆಳಕಂಡ ಷರತ್ತುಗಳನ್ವಯ ಅಳವಡಿಸಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಅನುಮತಿ ನೀಡಿದೆ.

ಷರತ್ತುಗಳು:

1. ಪ್ರಚಲಿತ ಆರ್ಥಿಕ ನಿಯಮಗಳು ಹಾಗೂ ಕೆ.ಟಿ.ಪಿ.ಪಿ. ನಿಯಮಗಳನ್ನು ಚಾಚೂ ತಪ್ಪದೆ ಪಾಲಿಸುವುದು.
2. ಕಾರ್ಯಾದೇಶ ನೀಡುವ ಮುನ್ನ ಸರ್ಕಾರದ ಅನುಮೋದನೆಯನ್ನು ಪಡೆಯುವುದು.
3. ಬೆಂಗಳೂರು ಉತ್ತರ, ದಕ್ಷಿಣ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆಡಳಿತ ಉಪನಿರ್ದೇಶಕರುಗಳಿಂದ ಪ್ರತ್ಯೇಕವಾಗಿ ಟೆಂಡರ್ ಕರೆಯಲು ಆದೇಶಿಸುವುದು.
4. ಸದರಿ ಟೆಂಡರನ್ನು 21 ದಿನಗಳ ಅಲ್ಪಾವಧಿ ಟೆಂಡರ್ ಕರೆಯಲು ಅನುಮತಿ ನೀಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 1100 ವೆಚ್ಚ–8/2014, ದಿನಾಂಕ:11.11.2014 ರಲ್ಲಿ ನೀಡಿದ ಸಹಮತಿ ಅನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ
ಸಹಿ/–
(ಐ.ಎಫ್.ಮಾಗಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಯೋಜನೆ)

ಗೆ:

1. ಮಹಾಲೇಖಪಾಲರು, ಕರ್ನಾಟಕ (ಆಡಿಟ್ 1 & 2) ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ಖಜಾನೆಗಳ ಇಲಾಖೆ, ಬೆಂಗಳೂರು.
4. ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
5. ಉಪನಿರ್ದೇಶಕರು, ನೆಟ್‌ವರ್ಕ್ ಮ್ಯಾನೇಜ್‌ಮೆಂಟ್, ಗಣಕಕೇಂದ್ರ, ನಂ.49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
6. ಸರ್ಕಾರದ ಅಧೀನ ಕಾರ್ಯದರ್ಶಿ, ಯೋಜನೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, (ವೆಚ್ಚ 7 & 8), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
8. ಉಪನಿರ್ದೇಶಕರು(ಆಡಳಿತ), ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು.
9. ಉಪನಿರ್ದೇಶಕರು(ಆಡಳಿತ), ಬೆಂಗಳೂರು ದಕ್ಷಿಣ ಜಿಲ್ಲೆ, ಬೆಂಗಳೂರು.

10. ಕೋ–ಆರ್ಡಿನೇಟರ್, ಮಾಹಿತಿ ಕೇಂದ್ರ ಶಿಕ್ಷಣ ಇಲಾಖೆ, ಬೆಂಗಳೂರು.
11. ಸಾಪ್ತಾಹಿಕ ರಾಜ್ಯ ಪತ್ರ/ಶಾಖಾ ರಕ್ಷಾ ಕಡತ.

ಪ್ರತಿ ಮಾಹಿತಿಗಾಗಿ:

1. ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಬಹುಮಹಡಿ ಕಟ್ಟಡ, ಬೆಂಗಳೂರು.
2. ಆಂತರಿಕ ಆರ್ಥಿಕ ಸಲಹೆಗಾರರ ಆಪ್ತ ಸಹಾಯಕ, ಶಿಕ್ಷಣ ಇಲಾಖೆ, ಬೆಂಗಳೂರು.

ಶ್ರೀ ಎಲ್.ಎ.ರವಿ ಸುಬ್ರಹ್ಮಣ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಇವತ್ತು ಸರ್ಕಾರಿ ಶಾಲೆಗಳಲ್ಲಿ ಸಿ.ಸಿ.ಟಿ.ವಿ.ಯನ್ನು ಅಳವಡಿಸುವುದರ ಬಗ್ಗೆ 200 ಮಕ್ಕಳಿಗಿಂತ ಹೆಚ್ಚಿಗೆ ಮಕ್ಕಳು ಇರುವಂಥ ಶಾಲೆಗಳಿಗೆ ಬೆಂಗಳೂರು ಮಹಾ ನಗರಕ್ಕೆ ಮಾತ್ರ ಸೀಮಿತಗೊಳಿಸಿಕೊಂಡಿದ್ದೇವೆ. ಎನ್ನುವ ಮಾತನ್ನು ಮಾನ್ಯ ಸಚಿವರು ಹೇಳಿದ್ದಾರೆ. ಆದರೆ 200 ಮಕ್ಕಳಿಗಿಂತ ಕಡಿಮೆ ಮಕ್ಕಳು ಓದುತ್ತಿರುವಂಥ ಶಾಲೆಗಳಲ್ಲಿ ಸುರಕ್ಷತೆ ಇದೆ ಎನ್ನತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ? ರಾಜ್ಯದ ಎಲ್ಲಾ ಶಾಲೆಗಳಲ್ಲೂ ಕೂಡ ಸಿ.ಸಿ. ಕ್ಯಾಮೆರಾಗಳನ್ನು ನವೆಂಬರ್ ಒಳಗೆ ಅಳವಡಿಸುವಂಥ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೋರ್ಟಿನ observation ಇದೆ, ಕೋರ್ಟಿನ ಆದೇಶ ಇದೆ. ಆದರೆ ರಾಜ್ಯದ ಯಾವುದೇ ಭಾಗದಲ್ಲಿ ಸಿ.ಸಿ. ಕ್ಯಾಮೆರಾಗಳನ್ನು ವಿಸ್ತರಣೆ ಮಾಡದೆ ಬೆಂಗಳೂರು ಮಹಾ ನಗರಕ್ಕೆ ಮಾತ್ರ ಸೀಮಿತವಾಗಿ 200 ಮಕ್ಕಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಓದುತ್ತಿರುವ ಶಾಲೆಗಳಿಗೆ ಸಿ.ಸಿ. ಕ್ಯಾಮೆರಾವನ್ನು ಅಳವಡಿಸುವುದರ ಉದ್ದೇಶ ಏನು? ರಾಜ್ಯದಲ್ಲಿ ಬೇರೆ ಬೇರೆ ಭಾಗದಲ್ಲಿರತಕ್ಕಂಥ ಹೆಣ್ಣು ಮಕ್ಕಳ ಸುರಕ್ಷತೆ ಬಗ್ಗೆ, ಅವರಿಗೆ ದೈಹಿಕವಾಗಿ,

ಮಾನಸಿಕವಾಗಿ ಅಥವಾ ಲೈಂಗಿಕವಾಗಿ ಯಾವುದೇ ಕಿರುಕುಳ ನಡೆಯುತ್ತಿಲ್ಲವೆನ್ನುವುದು ಏನಾದರೂ ಸರ್ಕಾರದ ಗಮನಕ್ಕೆ ಬಂದಿದೆಯೇ? ಅವರ ಸುರಕ್ಷತೆ ಬಗ್ಗೆ ತಿಳುವಳಿಕೆ ಕೊಡಬೇಕು. ಅನುದಾನಿತ ಮತ್ತು ಅನುದಾನರಹಿತ ಶಾಲೆಗಳ ಬಗ್ಗೆ ಅಂದರೆ 32 ಶೈಕ್ಷಣಿಕ ಜಿಲ್ಲೆಗಳಲ್ಲಿ 10,614 ಅನುದಾನಿತ ಶಾಲೆಗಳಲ್ಲಿ ಸುಮಾರು 1068 ಶಾಲೆಗಳಲ್ಲಿ ಕ್ಯಾಮೆರಾ ಅಳವಡಿಸಿದ್ದಾರೆಂದು ಹೇಳಿದ್ದೀರಿ. ಅದೇ ರೀತಿ 7,000 ಅನುದಾನಿತ ಶಾಲೆಗಳಲ್ಲಿ 860 ಅಂದರೆ 10% ಶಾಲೆಗಳಲ್ಲಿ ಮಾತ್ರ ಕ್ಯಾಮೆರಾ ಅಳವಡಿಕೆ ಆಗಿದೆ. ಅದು ಮುಂದೆ ಅಳವಡಿಕೆ ಆಗುತ್ತದೆಯೇ? ಅದರ ಬಗ್ಗೆ ನಿಮ್ಮ ಕ್ರಮವೇನು? ಎನ್ನುವುದನ್ನು ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಹೇಳಬೇಕು.

ಶ್ರೀ ಕಿಮ್ಮನೆ ರತ್ನಾಕರ್: ಮಾನ್ಯ ಸಭಾಧ್ಯಕ್ಷರೆ, ಗೌರವಾನ್ವಿತ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆಯಲ್ಲಿ ಪ್ರಮುಖವಾಗಿ ನಾವು ಈ ಬಗ್ಗೆ ಇರತಕ್ಕಂಥ ನಿಯಮಗಳನ್ನು ಇಡೀ ರಾಜ್ಯದಲ್ಲಿ ಮಾಡಿದ್ದೇವೆ. ಸರ್ಕಾರಿ ಮತ್ತು ಖಾಸಗಿ ಶಾಲೆಗಳೆರಡರಲ್ಲಿಯೂ ಸಿ.ಸಿ.ಟಿ.ವಿ.ಯನ್ನು ಅಳವಡಿಸಬೇಕೆನ್ನುವ ಉದ್ದೇಶವಿದೆ. ಆದರೆ, ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ಬೆಂಗಳೂರು ಜಿಲ್ಲೆಯ ಪ್ರಥಮ ಹಂತದಲ್ಲಿ ಮಾಡಬೇಕೆಂದು ನಾವು ಕೈಗೆತ್ತಿಕೊಂಡಿದ್ದೇವೆ. ಉಳಿದವರಿಗೆ ಸುರಕ್ಷತೆ ಕೊಡಬಾರದು ಎನ್ನುವ ಉದ್ದೇಶವಿಲ್ಲ. ಇಡೀ ರಾಜ್ಯದಲ್ಲಿ ಸಿ.ಟಿ. ಟಿ.ವಿ. ಯನ್ನು ಅಳವಡಿಸಲು ಎಷ್ಟು ಹಣ ಬೇಕಾಗುತ್ತದೆ ಎನ್ನುವುದನ್ನು ಮನಗಂಡು ನಂತರದಲ್ಲಿ ಅಳವಡಿಸಲಾಗುತ್ತದೆ. ಈಗ ಸುಮಾರು 60,000 ಶಾಲೆಗಳಿವೆ. ಕಾರ್ಪೋರೇಷನ್ ವ್ಯಾಪ್ತಿಯಲ್ಲಿ ಬೆಂಗಳೂರು ಜಿಲ್ಲೆಯಲ್ಲಿರುವ ಶಾಲೆಗಳಿಗೆ ಪ್ರಥಮ ಹಂತದಲ್ಲಿ ಅಳವಡಿಸಬೇಕೆನ್ನುವ ಪ್ರಯತ್ನವನ್ನು ನಾವು ಮಾಡಿದ್ದೇವೆ. ಉಳಿದ ಶಾಲೆಗಳಿಗೆ ಆರ್ಥಿಕ ಲಭ್ಯತೆ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ನಾನು ಏನು ಶಿಕ್ಷಣ ಇಲಾಖೆಯಿಂದ ನಿಯಮಗಳನ್ನು ಜಾರಿ ಮಾಡಿದ್ದೇವೆ ಅದನ್ನು ಅನುಷ್ಠಾನ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ.

ಶ್ರೀ ಎಲ್.ಎ.ರವಿ ಸುಬ್ರಮಣ್ಯ: ಮಾನ್ಯ ಅಧ್ಯಕ್ಷರೆ, ಇದು ಬೆಂಗಳೂರು ಬಿಟ್ಟು ಹೊರಗಡೆ ಬಹಳ ನಡೆಯುತ್ತದೆ. ಆದರೆ, ಇಲ್ಲಿ ಸ್ವಲ್ಪ ಪ್ರಜ್ಞಾವಂತರು ಇರುವುದರಿಂದ ವಿಷಯಗಳು ಬೇಗ ಹೊರಗಡೆ ಬರುತ್ತಿಲ್ಲ. ಇದಕ್ಕೆ time bound ಇದೆಯೇ? ದಿನಾಂಕ: 05.11.2014 ರಲ್ಲಿ ಟೆಂಡರ್ ಕರೆದಿದ್ದೇವೆಂದು ತಾವು ಉತ್ತರವನ್ನು ಕೊಟ್ಟಿದ್ದೀರಿ. ಆದರೆ ಸರ್ಕಾರದ ಆದೇಶ ದಿನಾಂಕ: 02.12.2014ರಲ್ಲಿ ಇದೆ. ಕಳೆದ ವಾರ ಆದೇಶ ಮಾಡಿದ್ದೀರಿ. ನವೆಂಬರ್ ತಿಂಗಳಿನಲ್ಲಿ ಟೆಂಡರ್ ಕರೆದಿದ್ದೇವೆಂದು ಹೇಳಿದ್ದೀರಿ. ಇದರ ಬಗ್ಗೆ clarification ಬೇಕು. ಹಾಗೆ ಉಳಿದ ಶಾಲೆಗಳಿಗೆ ಯಾವಾಗ ಸಿ.ಸಿ. ಕ್ಯಾಮೆರಾಗಳನ್ನು ಅಳವಡಿಸುತ್ತೀರಿ? ಒಂದೊಂದು ಶಾಲೆಗೆ ನಾಲ್ಕು ಕ್ಯಾಮೆರಾಗಳನ್ನು ಸೀಮಿತ ಮಾಡಿದ್ದೀರಿ. ಖಾಸಗಿ ಶಾಲೆಗಳಲ್ಲಿ toilet, class room, corridor ಗಳಲ್ಲಿ ಇರಬೇಕೆಂದು ಇದೆ. ಆದರೆ ಈ ರೀತಿ ವ್ಯತ್ಯಾಸ ಏಕೆ? ಸರ್ಕಾರಿ ಶಾಲೆಗಳಿಗೂ ಎಲ್ಲಾ ಕಡೆ ಸಿ.ಸಿ. ಕ್ಯಾಮೆರಾಗಳನ್ನು ಅಳವಡಿಸಬಹುದಾ? ಯಾವಾಗ ಒದಗಿಸುತ್ತೀರಿ?

ಶ್ರೀ ಅರವಿಂದ ಲಿಂಬಾವಳಿ: ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುತ್ತೇನೆ. ನಂತರ ಅವರು ಎರಡಕ್ಕೂ ಒಂದೇ ಸಲ ಉತ್ತರ ಕೊಡಲಿ. ಮಾನ್ಯ ರವಿ ಸುಬ್ರಮಣ್ಯರವರು ಕೇಳಿದರು. ಹೈಕೋರ್ಟ್ ಆದೇಶ ಇದೆ. ಹೈಕೋರ್ಟ್ ಆದೇಶವನ್ನು ಇವರೇ ಒಪ್ಪಿಕೊಂಡಿದ್ದಾರೆ. ಏನು ಆದೇಶ ಬರುತ್ತದೆ ಆ ಆದೇಶವನ್ನು ನಾವು ಪಾಲಿಸುತ್ತೇವೆಂದು ಕಮೀಷನರ್ ರವರು ಉತ್ತರವನ್ನು ಕೊಟ್ಟಿದ್ದಾರೆ. ನವೆಂಬರ್ 2014 ರೊಳಗೆ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಸಿ.ಸಿ.ಟಿ.ವಿ.ಯನ್ನು ಅಳವಡಿಸುತ್ತೇವೆಂದು ತಾವು ಒಪ್ಪಿಕೊಂಡಿದ್ದೀರಿ. ಕೋರ್ಟ್ ಮುಂದೆಯೂ ಸಹ ಹೇಳಿದ್ದೀರಿ. ಆ ಹಿನ್ನೆಲೆಯಲ್ಲಿ ಬೆಂಗಳೂರು ನಗರದಲ್ಲಿ 200 ಹೆಣ್ಣು ಮಕ್ಕಳು ಇರುವಂಥ ಶಾಲೆಗಳಲ್ಲಿ ಮಾತ್ರ ಸಿ.ಟಿ.ಟಿ.ವಿ.ಯನ್ನು ಅಳವಡಿಸುತ್ತೇವೆಂದು ಹೇಳಿದ್ದಾರೆ. ಮಾನ್ಯ ಸಚಿವರು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ವಿಶೇಷ ಅನುದಾನವನ್ನು ತೆಗೆದುಕೊಂಡು ಇದನ್ನು ಯುದ್ಧೋಪಾದಿಯಲ್ಲಿ ಮಾಡಬೇಕಾಗುತ್ತದೆ. ಏಕೆಂದರೆ ಇದು ರಕ್ಷಣೆಯ ಪ್ರಶ್ನೆಯಾಗಿದೆ. ಸರ್ಕಾರಿ ಶಾಲೆಗಳಲ್ಲಿ

ಓದುತ್ತಿರುವಂಥ ಹೆಣ್ಣುಮಕ್ಕಳಿಗೆ ರಕ್ಷಣೆ ಇಲ್ಲ. ಬದಲಿಗೆ ಖಾಸಗಿ ಶಾಲೆಗಳಲ್ಲಿ ಇರತಕ್ಕಂಥ ಮಕ್ಕಳ ರಕ್ಷಣೆ ಬಗ್ಗೆ ತಾವು insist ಮಾಡುತ್ತಿದ್ದೀರಿ. ಒಂದು ಕಡೆ ಏಳು ಪುಟಗಳ ಸುತ್ತೋಲೆಯನ್ನು ಹೊರಡಿಸಿದ್ದೀರಿ. ಇನ್ನೊಂದು ಕಡೆ ಎಂಟು ಪುಟಗಳ ಸುತ್ತೋಲೆಯನ್ನು ಹೊರಡಿಸಿದ್ದೀರಿ. ಅದರಲ್ಲಿ ಏನಾದರೂ ತಪ್ಪುಗಳು ಇದ್ದೇ ಇರುತ್ತವೆ. ಅದು 10% ಕೂಡ ಖಾಸಗಿ ಶಾಲೆಗಳಲ್ಲಿ implement ಆಗಿಲ್ಲ. ಹೀಗಾಗಿ ಇಷ್ಟೊಂದು ನಿರಾಯಾಸವಾಗಿ ಅವರು ಈ ಕ್ರಮವನ್ನು ಜರುಗಿಸಿದರೆ ಆ ರೀತಿಯ ಅನಾಹುತಗಳು ನಿಶ್ಚಿತವಾಗಿ ಹೆಚ್ಚಾಗುತ್ತವೆ. ಆ ದೃಷ್ಟಿಯಿಂದ ಸರ್ಕಾರ ಇದನ್ನು ತೀವ್ರವಾಗಿ ಪರಿಗಣಿಸಿ ಒಂದು ತಿಂಗಳೊಳಗೆ ಮಾಡುತ್ತೀರಾ ಎಂಬುದರ ಬಗ್ಗೆ ನಿಶ್ಚಿತವಾದಂಥ ಒಂದು ಭರವಸೆಯನ್ನು ಈ ಸದನದಲ್ಲಿ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಕಿಮ್ಮನೆ ರತ್ನಾಕರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಗೌರವಾನ್ವಿತ ಸದಸ್ಯರು ಹೇಳುತ್ತಿರುವುದರಲ್ಲಿ ಅರ್ಥವಿದೆ. ನಾವು ಈಗಾಗಲೇ ಮಾನ್ಯ ಗೌರವಾನ್ವಿತ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ ಕರೆದು ಈ ಬಗ್ಗೆ ಚರ್ಚೆ ಮಾಡಿದ್ದೇವೆ. ನಾವು long term tender ಅನ್ನು ಕರೆದು ಮಾಡಿದರೆ ತಕ್ಷಣದಲ್ಲಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದಕ್ಕೆ ಸಾಧ್ಯವಾಗುವುದಿಲ್ಲವೆನ್ನುವುದನ್ನು ಮನಗಂಡು short term tender ಅನ್ನು ಕರೆದಿದ್ದೇವೆ. ಮಾನ್ಯ ರವಿ ಸುಬ್ರಮಣ್ಯರವರು ಯಾವ ಕಾರಣಕ್ಕಾಗಿ ಎಂದು ಹೇಳಿದ್ದಾರೆ. Long term tender ಅನ್ನು ಕರೆದರೆ ಅದನ್ನು ಅನುಷ್ಠಾನ ಮಾಡುವುದಕ್ಕೆ ತೊಂದರೆ ಆಗುತ್ತದೆ ಎನ್ನುವ ಕಾರಣಕ್ಕಾಗಿ short term tender ಗೆ ಅನುಮತಿ ಕೊಟ್ಟು corporation ವ್ಯಾಪ್ತಿಯಲ್ಲಿ ಪ್ರಥಮ ಹಂತದಲ್ಲಿ ಮಾಡುವಂಥದ್ದು ಮತ್ತು ನ್ಯಾಯಾಲಯದಲ್ಲಿ ಏನು ಆದೇಶ ಮಾಡಿದ್ದಾರೆ ಆ ಆದೇಶದಲ್ಲಿ ಕೂಡ ಒಂದು ಸಮಿತಿ ಮಾಡಬೇಕೆಂದು ನಮಗೆ ಹೇಳಿದರು. ಅದಕ್ಕಾಗಿ ರಾಜ್ಯ, ಜಿಲ್ಲಾ, ತಾಲ್ಲೂಕು ಮಟ್ಟದಲ್ಲಿ ಒಂದು ಸಮಿತಿಯನ್ನು ಮಾಡಿ ಯಾವ ಯಾವ ರೀತಿ ಮಾಡಬೇಕು ಹಾಗೂ ಮಾರ್ಗಸೂಚಿಯಲ್ಲಿ ಯಾವ ರೀತಿಯ ಬದಲಾವಣೆ ಮಾಡಬೇಕೆನ್ನುವುದಕ್ಕೆ ಒಂದು ಸಮಿತಿಯನ್ನು

ರಚನೆ ಮಾಡಬೇಕೆಂದು ಒಂದು ನಿರ್ದೇಶನವನ್ನು ಕೊಟ್ಟಿದ್ದರು. ಅದೇ ರೀತಿಯಲ್ಲಿ ನಾವು ಒಂದು ಸಮಿತಿಯನ್ನು ರಚನೆ ಮಾಡಿದ್ದೇವೆ. ಮಾರ್ಗಸೂಚಿಗಳು ಏನು ಬರುತ್ತವೆ ಅದರ ಆಧಾರದ ಮೇಲೆ ಅನುಷ್ಠಾನ ಮಾಡಿದ್ದೇವೆ. ಸಿ.ಸಿ.ಟಿ.ವಿ. ಕ್ಯಾಮೆರಾ ಅಳವಡಿಕೆಯನ್ನು 1–2 ತಿಂಗಳಲ್ಲಿ ಅನುಷ್ಠಾನ ಮಾಡುತ್ತೇವೆಂದು ಸದನದಲ್ಲಿ ಕೇವಲ ಭರವಸೆಯನ್ನು ಕೊಟ್ಟರೆ ಆಗುವುದಿಲ್ಲ. ಅನುಷ್ಠಾನ ಮಾಡುವುದಕ್ಕೆ ಹಣದ ಕೊರತೆ ಬಗ್ಗೆ ಸಹ ನಾವು ಆಲೋಚನೆ ಮಾಡಬೇಕಾಗುತ್ತದೆ. ಆದ್ದರಿಂದ ಮಾಹಿತಿಗಳನ್ನು ತರಿಸಿಕೊಂಡು ಆ ನಂತರದಲ್ಲಿ ಹಣದ ಲಭ್ಯತೆ ಆಧಾರದ ಮೇಲೆ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್(ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಸಭಾಧ್ಯಕ್ಷರೆ, ಒಟ್ಟಿನಲ್ಲಿ ಕೋರ್ಟ್‌ನಲ್ಲಿ ಅಫಿಡವಿಟ್ ಫ್ಯೆಲ್ ಮಾಡುತ್ತೇವೆಂದು ಹೇಳಿದ್ದೀರಿ. ಆದರೆ, ಎಷ್ಟು ದಿವಸಗಳೊಳಗಾಗಿ ಮಾಡುತ್ತೀರೆನ್ನುವುದಕ್ಕೆ ಒಂದು time bound ಬೇಕು. ಇದಕ್ಕೆ ಇಂತಿಷ್ಟು ಖರ್ಚು ಬರುತ್ತದೆ ಎನ್ನುವುದಕ್ಕೆ ಒಂದು calculation ಬೇಕಲ್ಲವೇ? ಅದನ್ನು ನೀವು ಆರ್ಥಿಕ ಇಲಾಖೆಗೆ ಕಳುಹಿಸಬೇಕು. ಏಕೆಂದರೆ, ಇದೆ ಕಾರಣದ ಮೇಲೆ ಮತ್ತೆ next sessionನಲ್ಲಿ ಪ್ರಶ್ನೆ ಕೇಳಿದರೆ ಇದೇ ಉತ್ತರ ಬರುತ್ತದೆ. ಅಷ್ಟರೊಳಗೆ ಏನಾದರೂ progress ಆಗಬೇಕಲ್ಲವೇ? ನೀವೇನಾದರೂ ಆರ್ಥಿಕ ಇಲಾಖೆಗೆ proposal ಕಳುಹಿಸಿದ್ದೀರಾ? ಇಷ್ಟು ಹಣ ಬೇಕಾಗುತ್ತದೆಂದು ಮುಖ್ಯಮಂತ್ರಿಯವರಿಗೆ ಏನಾದರೂ ಹೇಳಿದ್ದೀರಾ? ಹಂತ ಹಂತವಾಗಿಯಾದರೂ ಮಾಡಬೇಕಲ್ಲವೇ? At a stretch ಮಾಡದೇ ಇದ್ದರೂ ಹಂತ ಹಂತವಾಗಿ ಒಂದು ತಿಂಗಳಿನಲ್ಲಿ ಇಂತಿಷ್ಟು ಎಂದು ಏನಾದರೂ ಮಾಡಬೇಕಲ್ಲವೇ? ಇದಕ್ಕೆ ಒಂದು planning ಇರಬೇಕಲ್ಲವೆ?

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ನೀವೇ ಮಾಡಲಾರದೆ ಖಾಸಗಿಯಯವರಿಗೆ ಹೇಗೆ insist ಮಾಡುತ್ತೀರಿ? ಸರ್ಕಾರ ತಾನು ಮಾಡುವುಕ್ಕೆ ತಯಾರಿಲ್ಲ. ಖಾಸಗಿಯವರಿಗೆ ಮಾಡಲೇಬೇಕು ಎಂದು ಹೇಳುತ್ತೀರಿ. ನೀವು insist ಮಾಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಸರ್ಕಾರಿ ಶಾಲೆಗಳಲ್ಲಿ ಮೊದಲು ಅಳವಡಿಸಬೇಕಲ್ಲವೇ? ಆದ್ದರಿಂದ ಶಾಲೆಗಳಲ್ಲಿ

ಅತ್ಯಾಚಾರ ಮಾಡಬಾರದೆಂದು ಒಂದು ಬೋರ್ಡ್ ಹಾಕಿ. ಅತ್ಯಾಚಾರ ಮಾಡುವವರು ಖಾಸಗಿ ಶಾಲೆಗಳಿಗೆ ಮಾತ್ರ ಹೋಗಿ ಎಂದು ಹೇಳಿ ಒಂದು ಬೋರ್ಡ್ ಹಾಕಿ.

ಶ್ರೀ ಕಾಶಪ್ಪನವರ್ ವಿ.ಶಿವಶಂಕರಪ್ಪ: ಮಾನ್ಯ ಅಧ್ಯಕ್ಷರೆ, ಇದಕ್ಕೆ ಪೂರಕವಾಗಿ ನನ್ನದೊಂದು ಪ್ರಶ್ನೆಯಿದೆ.

ಶ್ರೀ ಅರವಿಂದ ಲಿಂಬಾವಳಿ: ಮಾನ್ಯ ಅಧ್ಯಕ್ಷರೆ, ಕೋರ್ಟಿನಲ್ಲಿ ಸಿಸಿ ಟಿವಿ ಬಗ್ಗೆಯೇ ಹೇಳಿದ್ದಾರೆ. ನವೆಂಬರ್ 2014ರೊಳಗೆ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಸಿಸಿ ಟಿವಿಯನ್ನು ಅಳವಡಿಸುತ್ತೇವೆಂದು ನೀವೇ ಹೇಳಿದ್ದೀರಿ. ಈಗಾಗಲೇ ನವೆಂಬರ್ 2014 ಮುಗಿದು ಹೋಯಿತು. ಆ ಹಿನ್ನೆಲೆಯಲ್ಲಿ ದಯವಿಟ್ಟು ಈ ವಿಚಾರವನ್ನು ತೀವ್ರವಾಗಿ ಪರಿಗಣಿಸಬೇಕು. ಹಣವಿಲ್ಲವಾದ್ದರಿಂದ ನಮಗೆ ಈ ಕೆಲಸ ಮಾಡುವುದಕ್ಕೆ ಆಗುತ್ತಿಲ್ಲ, 200 ಜನ ಹೆಣ್ಣುಮಕ್ಕಳಿರುವ ಶಾಲೆಗಳಲ್ಲಿ ಮಾತ್ರ ಅಳವಡಿಸುತ್ತೇವೆ, ಬೆಂಗಳೂರಿನಲ್ಲಿ ಮಾತ್ರ ಅಳವಡಿಸುತ್ತೇವೆ ಎಂದು ಹೇಳಿದರೆ ಇದು ಹಾರಿಕೆ ಉತ್ತರ ಆಗುತ್ತದೆ. ದಯವಿಟ್ಟು ಸರಿಯಾದ ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು: ಕೋರ್ಟ್ ಆದೇಶದ ಪ್ರಕಾರ ಮಾಡುತ್ತೀರೋ ಅಥವಾ ಇಲ್ಲವೋ ಎಂದು ಹೇಳಬೇಕು.

ಶ್ರೀ ಕಾಶಪ್ಪನವರ್ ವಿ.ಶಿವಶಂಕರಪ್ಪ: ಮಾನ್ಯ ಅಧ್ಯಕ್ಷರೆ, ಇದಕ್ಕೆ ಪೂರಕವಾಗಿ ನನ್ನದೊಂದು ಪ್ರಶ್ನೆಯಿದೆ. ಸರ್ಕಾರ ಕೊಡುವಂಥ ಎಲ್ಲಾ ಖಾಸಗಿ, ಅನುದಾನ ರಹಿತ, ಅನುದಾನ ಸಹಿತ ಇರುವಂಥ ಶಾಲೆಗಳಲ್ಲಿ ಸಹ ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತಿದೆ. ಇದು ಕೇವಲ ಸರ್ಕಾರಿ ಶಾಲೆಯಲ್ಲಿ ಅಷ್ಟೇ ಅಲ್ಲ, ಅನುದಾನ ಪಡೆದಂಥ ಎಲ್ಲಾ ಖಾಸಗಿ ಶಾಲೆಯಲ್ಲಿ ಸಹ ನಡೆಯುತ್ತಿರುವುದರಿಂದ ಶಾಲೆಗಳಲ್ಲಿ ತೀವ್ರಗತಿಯಲ್ಲಿ ಸಿಸಿಟಿವಿಯನ್ನು ಅಳವಡಿಸುವುದಕ್ಕೆ ಆದೇಶ ಹೊರಡಿಸಬೇಕು ಎಂದು ಮಾನ್ಯ ಸಚಿವರಿಗೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈಗಾಗಲೇ ಸರ್ಕಾರ ಸಹ ಒಂದು ವರದಿಯನ್ನು ಕಳುಹಿಸಿದೆ. ಸರ್ಕಾರ ಅನುದಾನ ನೀಡುತ್ತಿರುವ ಖಾಸಗಿ

ಶಾಲೆಗಳಲ್ಲಿ ಸಹ SDMCಯನ್ನು ಮಾಡಬೇಕು. ಕಡ್ಡಾಯವಾಗಿ ಶಾಲಾ ಸುಧಾರಣಾ ಸಮಿತಿಗಳನ್ನು ರಚಿಸಬೇಕು. ಈ ಸಮಿತಿಯವರಿಗೂ ಹೆಚ್ಚಿನ ಸೂಚನೆಯನ್ನು ಕೊಟ್ಟು ನಿಯಂತ್ರಣ ತರುವುದಕ್ಕೆ ಅವಕಾಶ ಮಾಡಿಕೊಡಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕಿಮ್ಮನೆ ರತ್ನಾಕರ್(ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ವಿರೋಧ ಪಕ್ಷದ ನಾಯಕರು ಸಹ ಈ ವಿಷಯವನ್ನು ಪ್ರಸ್ತಾಪ ಮಾಡಿದರು. ಈಗಾಗಲೇ ನಾವು ಮಾಹಿತಿಯನ್ನು ಸಂಗ್ರಹಿಸಿದ್ದೇವೆ. ಆರ್ಥಿಕ ಇಲಾಖೆ ಮತ್ತು ಮಾನ್ಯ ಮುಖ್ಯಮಂತ್ರಿಯವರೊಂದಿಗೆ ಇದಕ್ಕೆ ಎಷ್ಟು ಹಣ ಬೇಕಾಗಬಹುದು ಎನ್ನುವುದರ ಬಗ್ಗೆ ಚರ್ಚೆ ಮಾಡಿದ್ದೇವೆ. ಈಗಾಗಲೇ ಮಾಹಿತಿಯನ್ನು ಕೂಡ ನಾವು ಸಂಗ್ರಹಿಸಿದ್ದೇವೆ. ಮೊದಲನೇ ಹಂತದಲ್ಲಿ ಈಗಾಗಲೇ ಪರೀಕ್ಷೆಗಳು ನಡೆಯುತ್ತಿರುವಂಥ ಪರೀಕ್ಷಾ ಕೇಂದ್ರಗಳು, ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಪರೀಕ್ಷಾ ಕೇಂದ್ರಗಳು 2 ರಿಂದ 3,000 ಕೇಂದ್ರಗಳು ಬರುತ್ತವೆ. ಪ್ರಥಮ ಹಂತದಲ್ಲಿ ಇವುಗಳಿಗೆ ಸಿಸಿಟಿವಿ ಕ್ಯಾಮೆರಾ ಅಳವಡಿಸಬೇಕೆನ್ನುವ ಯೋಜನೆಯನ್ನು ನಾವು ಮಾಡಿಕೊಂಡಿದ್ದೇವೆ. ಈ ಎರಡೂ ದೃಷ್ಟಿಯಿಂದ, ಏಕೆಂದರೆ ಕೆಲವು ಬಾರಿ ಬಹಳಷ್ಟು ಕಡೆ copying ನಡೆಯುತ್ತಿದೆ ಎನ್ನುವಂಥದ್ದು ಹಲವಾರು ವರ್ಷಗಳಿಂದ ಒಂದು ಆಪಾದನೆಯಾಗಿದೆ. ಇದರಿಂದ ಇದನ್ನು ಸಹ ತಡೆಗಟ್ಟಲು ಸಾಧ್ಯವಾಗುತ್ತದೆ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಮೊದಲು ಪ್ರಥಮ ಹಂತದಲ್ಲಿ ಇಡೀ ರಾಜ್ಯಾದ್ಯಂತ ಎಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಪರೀಕ್ಷಾ ಕೇಂದ್ರಗಳಿವೆಯೋ ಅಲ್ಲೆಲ್ಲಾ ಅಳವಡಿಸಿಕೊಂಡು ನಂತರ ಅದನ್ನು ಕಾರಿಡಾರ್‌ಗೆ shift ಮಾಡಬಹುದೆನ್ನುವುದು ಒಂದು ವಿಚಾರ. ಒಟ್ಟು ಹಣದ ಬಗ್ಗೆ ನಾವು calculate ಮಾಡಿದ್ದೇವೆ. ಈ ಸದನ ಮುಕ್ತಾಯವಾಗುವುದರೊಳಗೆ ಎಷ್ಟು ಹಣ ಬೇಕಾಗಬಹುದು ಎನ್ನುವಂಥ ಮಾಹಿತಿಯನ್ನು ಕೊಡುತ್ತೇನೆ.

ಶ್ರೀ ಎನ್.ಹೆಚ್.ಕೋನರೆಡ್ಡಿ: ಅನುದಾನ ಇದ್ದರೆ, ಇದಕ್ಕೆ ಏನು action plan ಮಾಡಿದ್ದೀರಿ ಎನ್ನುವುದನ್ನು ಹೇಳಿ. Action plan ಏನು ಎನುವುದರ ಬಗ್ಗೆ ನೀವು ಹೇಳಿಲ್ಲ.

ಅಧ್ಯಕ್ಷರು: ಇಲ್ಲ ಎಂದು ಹೇಳಿದರಲ್ಲ.

ಶ್ರೀ ಎಲ್.ಎ.ರವಿ ಸುಬ್ರಹ್ಮಣ್ಯ: ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಒಂದು ನಿಮಿಷ ಕಾಲಾವಕಾಶ ಕೊಡಿ. ಮಾನ್ಯ ಮುಖ್ಯಮಂತ್ರಿಗಳು ವಿಶೇಷ ಗಮನ ಕೊಟ್ಟು ಹಣ ಬಿಡುಗಡೆ ಮಾಡಿಸಿಕೊಡಬೇಕು. ಇದು ಈ ಇಲಾಖೆಗೆ ಸಂಬಂಧಪಟ್ಟಿಲ್ಲ, ಆದರೂ ಕ್ಯಾಮರಾಗಳಿಗೆ ಸಂಬಂಧಪಟ್ಟಿರುವ ವಿಷಯವಾದ್ದರಿಂದ ನಾನು ನನ್ನ ಕ್ಷೇತ್ರದ ಸುರಕ್ಷತೆಯ ದೃಷ್ಟಿಯಿಂದ ಶಾಸಕರ ಅನುದಾನದಲ್ಲಿ ಸುಮಾರು 500 ಕ್ಯಾಮೆರಾಗಳನ್ನು ಕ್ಷೇತ್ರದ ಎಲ್ಲಾ ಮೂಲೆಗಳಲ್ಲಿ ಹಾಕಿಸುತ್ತೇವೆ ಎನ್ನುವ ಒಂದು ಅಭಿಪ್ರಾಯವನ್ನು ನೀಡಿದ ಮೇರೆಗೆ ಪೋಲೀಸ್ ಇಲಾಖೆಯಿಂದ ಪೊಲೀಸ್ ಕಮೀಷನರ್ ಮತ್ತು ಬೆಂಗಳೂರು ಡಿ.ಸಿ.ಯವರು ಇದರ ಅವಶ್ಯಕತೆ ಅತಿ ತೀವ್ರವಾಗಿದೆ, ಇದಕ್ಕೆ ಶಾಸಕರ ಅನುದಾನದಲ್ಲಿ ಹಣ ಬಿಡುಗಡೆ ಮಾಡಿ ಎಂದು ಮನವಿ ಮಾಡಿದ್ದಾರೆ. ಆದರೂ ಒಬ್ಬ ಅಧಿಕಾರಿ ಇದಕ್ಕೆ ಶಾಸಕರ ಅನುದಾನದಲ್ಲಿ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳಿದ್ದಾರೆ. ದಯವಿಟ್ಟು, ಕ್ಷೇತ್ರದ ಸುರಕ್ಷತೆಯ ದೃಷ್ಟಿಯಿಂದ, ಹೆಂಗಸರು-ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಶಾಸಕರ ಅನುದಾನದಲ್ಲಿ ನೀಡಿರುವ ಹಣವನ್ನು ಬಿಡುಗಡೆ ಮಾಡುವುದಕ್ಕೆ ಸರ್ಕಾರ ಒಂದು ಆದೇಶವನ್ನು ಹೊರಡಿಸಬೇಕು.

ಅಧ್ಯಕ್ಷರು: ಶಿಕ್ಷಣ ಸಚಿವರೆ ಉತ್ತರ ಹೇಳಿ.

ಶ್ರೀ ಕಿಮ್ಮನೆ ರತ್ನಾಕರ್: ನಿರ್ದೇಶನ ನೀಡುವ ವಿಚಾರ ನಮ್ಮ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ.

ಅಧ್ಯಕ್ಷರು: ಪರಿಶೀಲಿಸುತ್ತೇವೆ ಎಂದು ಹೇಳಿ.

ಶ್ರೀ ಕಿಮ್ಮನೆ ರತ್ನಾಕರ್: ಅದನ್ನು ಪರಿಶೀಲನೆ ಮಾಡುತ್ತೇವೆ.

ಅಧ್ಯಕ್ಷರು: ಶಾಸಕರ ಅನುದಾನದಲ್ಲಿ ಕೊಡುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಅರವಿಂದ ಲಿಂಬಾವಳಿ: ಮಾನ್ಯ ಅಧ್ಯಕ್ಷರೆ, ಶಾಸಕರ ಅನುದಾನದಲ್ಲಿ ಶಾಲೆಗಳಲ್ಲಿ ಸಿಸಿ ಟಿವಿ ಅಳವಡಿಸುವುದಕ್ಕೆ ಅವಕಾಶ ಕೊಡುತ್ತೀರಾ?

ಶ್ರೀ ಕಿಮ್ಮನೆ ರತ್ನಾಕರ್: ಮಾನ್ಯ ಅಧ್ಯಕ್ಷರೆ, ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಿರುವಂಥ ಹಣ ಮಂಜೂರಾತಿ ಏನಿದೆ, ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಿಂದ ಕೊಡುವುದಕ್ಕೆ ಖಂಡಿತವಾಗಿ ತಿದ್ದುಪಡಿ ಮಾಡುವುದಕ್ಕೆ ನಾನು ನಿವೇದನೆಯನ್ನು ಕಳುಹಿಸುತ್ತೇನೆ, ನಾನು ಪ್ರಯತ್ನ ಮಾಡುತ್ತೇನೆ. ಇದರಿಂದ ನಮಗೆ ಅನುಕೂಲವಾಗುತ್ತದೆ.

ಅಧ್ಯಕ್ಷರು: ರಾಜೇಶ್ ಹೆಚ್.ಪಿ.

ಶ್ರೀ ರಾಜೇಶ್ ಹೆಚ್.ಪಿ.(ಜಗಳೂರು): ಮಾನ್ಯ ಸಭಾಧ್ಯಕ್ಷರೆ, ಪ್ರಶ್ನೆ ಸಂಖ್ಯೆ:312ನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರನ್ನು ಕೇಳಬಯಸುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ(ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಉತ್ತರಗಳನ್ನು ಒದಗಿಸಲಾಗಿದೆ.

ಕುಡಿಯುವ ನೀರಿನ ಸಮಸ್ಯೆಗಳು

26(312), ಶ್ರೀ ರಾಜೇಶ್ ಹೆಚ್.ಪಿ. (ಜಗಳೂರು)

ಅ) ಜಗಳೂರು ವಿಧಾನಸಭಾ ಕ್ಷೇತ್ರದ ರಾಜೀವ್‌ಗಾಂಧಿ ಸಬ್ ಮಿಷನ್ ಯೋಜನೆಯಡಿ ಕುಡಿಯುವ ನೀರಿನ ವ್ಯವಸ್ಥೆಯ ಕಾರ್ಯಕ್ರಮ ಯಾವ ಹಂತದಲ್ಲಿರುತ್ತೆ; ಕುಡಿಯುವ ನೀರಲ್ಲಿ ಫ್ಲೋರೈಡ್ ಅಂಶ ಹೆಚ್ಚಾಗಿದ್ದು, ಇದರ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ.